ಆಂಡಯ್ಯ



ಡಾ॥ ಎಚ್. ತಿಪ್ಪೇರುದ್ರಸ್ವಾಮಿ

ಆಂಡಯ್ಯ

ಡಾ॥ ಎಚ್. ತಿಪ್ಪೇರುದ್ರಸ್ವಾಮಿ

ಐ ಬಿ ಎಚ್ ಪ್ರಕಾಶನ
ಗಾಂಧಿನಗರ ಬೆಂಗಳೂರು-೯

ಬೆಲೆ :
1-50

*

ಸರ್ವಸ್ವಾಮ್ಯ :
ಪ್ರಕಾಶಕರವು

*

ಚಿತ್ರಗಳು :
ಮನಮೋಹನ್

*

ಮೊದಲನೆಯ ಮುದ್ರಣ :
ನವೆಂಬರ್ 1972

*

ಅಧಿಕೃತ ಮಾರಾಟಗಾರರು :
ಇಂಡಿಯ ಬುಕ್ ಹೌಸ್
ಗಾಂಧಿನಗರ, ಬೆಂಗಳೂರು-9

*

ಐ ಬಿ ಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-9
ಇವರ ಪರವಾಗಿ ಶ್ರೀ ಪಿ. ಎಸ್. ಕಾಮತ್
ಪ್ರಕಾಶಿಸಿದುದು.

*

ಮುದ್ರಕರು :
ಐ ಬಿ ಎಚ್ ಪ್ರಕಾಶನ ಪ್ರಿಂಟರಿ
ಎಂ. ಎಸ್. ಆರ್. ಇಂಡಸ್ಟ್ರಿಯಲ್ ಎಸ್ಟೇಟ್
ಗೋಕುಲ ಅಂಚೆ ಕಚೇರಿ ಎದುರು
ಬೆಂಗಳೂರು-54

ಅರಿಕೆ

ಆಂಡಯ್ಯನನ್ನು ಕುರಿತ ಈ ಲಘು ಪರಿಚಯ ಮಕ್ಕಳಿಗೆ ಪ್ರಿಯ ವಾಗುವುದೆಂದು ನಂಬಿದ್ದೇನೆ. ಆ ಕವಿಯನ್ನು ಕುರಿತು ಕುತೂಹಲ ವನ್ನು ಹುಟ್ಟಿಸಿದರೆ ಸಾಕು; ಈ ಪ್ರಯತ್ನ ಸಫಲವಾದಂತೆ.

ಇದನ್ನು ಬರೆಯುವಲ್ಲಿ ಪ್ರೊ. ದೇ. ಜವರೇಗೌಡ ಅವರು ಸಂಪಾ ದಿಸಿ ವಿದ್ವತ್ ಪೂರ್ಣವಾದ ಮುನ್ನುಡಿಯನ್ನು ಬರೆದಿರುವ 'ಕಬ್ಬಿಗರ ಕಾವಂ' ಎಂಬ ಗ್ರಂಥದಿಂದ ಉಪಕೃತನಾಗಿರುವುದನ್ನು ಸ್ಮರಿಸಿಕೊಳ್ಳುತ್ತೇನೆ.

ಇದನ್ನು ನಾನು ಬರೆಯುವುದಕ್ಕೆ ಕಾರಣರಾದ ಐ. ಬಿ. ಎಚ್. ಪ್ರಕಾಶನದ ಮಿತ್ರರಿಗೆ ನನ್ನ ಕೃತಜ್ಞತೆಗಳು.

ಎಚ್. ತಿಪ್ಪೇರುದ್ರಸ್ವಾಮಿ

ಪರಿವಿಡಿ

ಯಾರು ಈ ಕವಿ

ಕಬ್ಬಿಗರ ಕಾವ

ಕಾಮನ ಕಥೆ

ಕನ್ನಡ ಮೆನಿಪ್ಪಾನಾಡು ಜೆಲ್ಲಾಯ್ತು

ಕಥೆ – ಕಾವ್ಯ

ಯಾರು ಈ ಕವಿ

"ಕನ್ನಡ ಎನೆ ಕುಣಿದಾಡುವುದೆನ್ನೆದೆ,
ಕನ್ನಡ ಎನೆ ಕಿವಿ ನಿಮಿರುವುದು !
ಕಾಮನ ಬಿಲ್ಲನು ಕಾಣುವ ಕವಿಯೊಲು
ತೆಕ್ಕನೆ ಮನ ಮೈಮರೆಯುವುದು ;
ಕನ್ನಡ ! ಕನ್ನಡ ! ಹಾ ಸವಿಗನ್ನಡ !"

"ಹೀಗೆಂದು ಕನ್ನಡದ ಒಬ್ಬ ಕವಿ ಹಾಡಿದ್ದಾರೆ, ಯಾರು ಗೊತ್ತೆ?" ಎಂದು ಉಪಾಧ್ಯಾಯರು ಕೇಳುತ್ತಿದ್ದಂತೆ ನಾಲ್ಕಾರು ಜನ ವಿದ್ಯಾರ್ಥಿಗಳು ಒಟ್ಟಿಗೇ ಹೇಳಿದರು ;

"ಗೊತ್ತು ಸಾರ್, ಗೊತ್ತು. ಕವಿ ಕುವೆಂಪು ಅಲ್ವೇ ಸಾರ್ ?"

"ಹೌದು, ಜ್ಞಾಪಕ ಇಟ್ಟುಕೊಂಡಿದ್ದೀರಿ. ಕುವೆಂಪು ಅವರು ಹೇಳಿರುವಂತೆ ಕನ್ನಡ ಎಂದೊಡನೆ ಹೃದಯ ಕುಣಿಯುತ್ತದೆ; ಕಿವಿ ನಿಮಿರುತ್ತದೆ. ಕನ್ನಡ ಕಸ್ತೂರಿ ಎಂದು ಇನ್ನೊಬ್ಬರು ಹೇಳಿದ್ದುಂಟು. ಕನ್ನಡಕ್ಕೆ ಈ ಇಂಪನ್ನೂ ಕಂಪನ್ನೂ ತಂದು ಕೊಟ್ಟವರು ಕನ್ನಡ ಕವಿಗಳು. ಸಾವಿರಾರು ವರ್ಷಗಳಿಂದ ಇಂತಹ ಅನೇಕ ಕವಿಗಳು ಕನ್ನಡದಲ್ಲಿ ಬಂದಿದ್ದಾರೆ. ಅದರಲ್ಲಿ ನೀವು ಕೇಳಿರುವ ಒಂದೆರಡು ಹೆಸರುಗಳನ್ನು ಹೇಳಿ ನೋಡೋಣ." ಉಪಾಧ್ಯಾಯರ ಈ ಮಾತುಗಳನ್ನು ಕೇಳಿ ತರಗತಿಯ ವಿದ್ಯಾರ್ಥಿಗಳೆಲ್ಲಾ ಕ್ಷಣಕಾಲ ಆಲೋಚಿಸಿದರು. ಅನಂತರ ಒಬ್ಬ ಹೇಳಿದ :

"ಪಂಪ ಸಾರ್"

ಅಷ್ಟರಲ್ಲಿ ಇನ್ನೊಬ್ಬ "ರನ್ನ ಸಾರ್" ಎನ್ನುತ್ತಿದ್ದಂತೆ ಮತ್ತೊಬ್ಬ

"ಕುಮಾರವ್ಯಾಸ,....ಹರಿಹರ ಕವಿಗಳು...."

"ಪರವಾಗಿಲ್ಲ. ಇವೆಲ್ಲಾ ಬಹಳ ಮುಖ್ಯವಾದ ಹೆಸರುಗಳೇ. ಇವರು ಕನ್ನಡದಲ್ಲಿ ಬಹಳ ದೊಡ್ಡ ಕವಿಗಳು. ಈ ಸಾಲಿಗೆ ಸೇರತಕ್ಕವರು ಇನ್ನೂ ಅನೇಕರಿದ್ದಾರೆ. ನಿಜವಾಗಿ ನೋಡಿದರೆ ಕನ್ನಡ ನಾಡನ್ನು ರೂಪಿಸಿ ಜನರ ಮನಸ್ಸನ್ನು ಆಳುತ್ತಿರುವವರು ಈ ಕವಿಗಳು. ಹೊರಗಿನ ಸರ್ಕಾರ ಇವತ್ತು ಬರುತ್ತದೆ, ನಾಳೆ ಬದಲಾಗುತ್ತದೆ; ಮಂತ್ರಿಗಳು ಬರುತ್ತಾರೆ, ಹೋಗುತ್ತಾರೆ. ಆದರೆ ಇದರ ಹಿಂದೆ ಒಂದು ಶಾಶ್ವತವಾದ ಮಂತ್ರಿಮಂಡಲ ಇದೆಯೆಂಬುದನ್ನು ಕುವೆಂಪುರವರೇ ಇನ್ನೊಂದು ಕಡೆ ಹೇಳಿದ್ದಾರೆ. ನಿಮಗೆ ಗೊತ್ತೇನು?"

"ಇಲ್ಲಾ ಸಾರ್, ಹೇಳಿ ಅದನ್ನು" ಹುಡುಗರು ಕೇಳಿದರು.

"ಹಾಗಾದರೆ ಕೇಳಿ" ಎಂದು ಉಪಾಧ್ಯಾಯರು ಹೇಳತೊಡಗಿದರು.

"ನೃಪತುಂಗನೆ ಚಕ್ರವರ್ತಿ !
ಪಂಪನಲ್ಲಿ ಮುಖ್ಯಮಂತ್ರಿ !
ರನ್ನ ಜನ್ನ ನಾಗವರ್ಮ
ರಾಘವಾಂಕ ಹರಿಹರ
ಬಸವೇಶ್ವರ ನಾರಣಪ್ಪ
ಸರ್ವಜ್ಞ ಷಡಕ್ಷರ :
ಸರಸ್ವತಿಯೆ ರಚಿಸಿದೊಂದು
ನಿತ್ಯಸಚಿವ ಮಂಡಲ
ತನಗೆ ರುಚಿರ ಕುಂಡಲ !"

"ನೋಡಿ ಇದು ಸರಸ್ವತಿಯೇ ರಚಿಸಿರುವ ಸಚಿವ

ಮಂಡಲ, ಅಖಂಡ ಕರ್ಣಾಟಕಕ್ಕೆ ಮನೋಹರವಾದ ಕುಂಡಲ!"

"ತುಂಬಾ ಚೆನ್ನಾಗಿದೆ ಸಾರ್. ಈ ಮಂತ್ರಿಗಳನ್ನು ಯಾರೂ ಇಳಿಸೋ ಹಾಗೇ ಇಲ್ಲ ಅಲ್ವೆ?" ಒಬ್ಬ ಕೇಳಿದ.

"ನೋಡು ನೀನೇನಾದ್ರೂ ಇಳಿಸಲಿಕ್ಕೆ ಪ್ರಯತ್ನ ಮಾಡ್ತೀಯೋ?" ಎಂದು ನಕ್ಕರು ಉಪಾಧ್ಯಾಯರು. ಹುಡುಗರ ನಗುವೂ ಆದರೊಡನೆ ಸೇರಿತು. ಮತ್ತೆ ಉಪಾಧ್ಯಾಯರು ಮುಂದುವರಿಸಿದರು:

"ಅದು ಕಾಲಕಳೆದ ಹಾಗೆಲ್ಲಾ ಶಕ್ತಿಯುತವಾಗಿ ಬೆಳೆಯುತ್ತಾ ಹೋಗುವ ಮಂತ್ರಿ ಮಂಡಲ. ಇದರಲ್ಲಿ ಮೇಲೆ ಹೇಳಿದ ಕವಿಗಳು ಬಹಳ ದೊಡ್ಡ ಶಕ್ತಿಗಳು. ಇದರ ಜೊತೆಗೆ ಇನ್ನೂ ಕೆಲವರು ಕವಿಗಳಿದ್ದಾರೆ. ಅವರು ಇಷ್ಟು ದೊಡ್ಡವರಲ್ಲದಿರಬಹುದು. ಆದರೆ ಇವರಿಗಿಂತ ಸ್ವಲ್ಪ ಹಿಂದೆ ನಿಂತು ಇವರಿಗೆ ಸಹಾಯಕರಾಗಿದ್ದಾರೆ."

"ಅವರು ಉಪಮಂತ್ರಿಗಳು ಅಲ್ವೇ ಸಾರ್?" ಕೇಳಿದ ಒಬ್ಬ ಕಿಲಾಡಿ ಹುಡುಗ.

"ನಿಜ. ಮೇಲಿನ ಹೋಲಿಕೆಯನ್ನೇ ಮುಂದುವರಿಸಿದರೆ ಒಂದರ್ಥದಲ್ಲಿ ಹಾಗೂ ಇಟ್ಟುಕೊಳ್ಳಬಹುದು. ಇಂದು ನೀವು ಕೇಳಲಿರುವುದು ಈ ಎರಡನೆಯ ಗುಂಪಿಗೆ ಸೇರಿದ ಕವಿಯ ಕಥೆ. ಪಂಪ ಮೊದಲಾದವರ ಬಗ್ಗೆ ನೀವು ಅಲ್ಪ ಸ್ವಲ್ಪ ಕೇಳಿರುತ್ತೀರಿ. ಆದರೆ ಈಗ ನಾನು ಹೇಳುವ ಕವಿಯ ಕಥೆಯನ್ನು ನೀವು ಕೇಳಿರಲಾರಿರಿ."

"ಯಾರು ಸಾರ್ ಆ ಕವಿ?" ಹುಡುಗರು ಕುತೂಹಲದಿಂದ ಕೇಳಿದರು.

"ಆಂಡಯ್ಯ ಎಂಬ ಹೆಸರನ್ನು ಕೇಳಿದ್ದೀರಾ?" ಉಪಾ

ಧ್ಯಾಯರ ಈ ಪ್ರಶ್ನೆಯನ್ನು ಕೇಳಿ ಹುಡುಗರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಯಾರಿಗೂ ಆ ಹೆಸರನ್ನು ಕೇಳಿದ ನೆನಪಿಲ್ಲ.

"ಇಲ್ಲ ಸಾರ್, ಆತ ಯಾರೋ ಗೊತ್ತಿಲ್ಲ."

"ಕನ್ನಡದಲ್ಲಿ ವಿಶಿಷ್ಟನಾದ ಕವಿ ಈತ. ಅಲ್ಲದೆ ಈತ ಬರೆದಿರುವ ಕಥೆಯೂ ಬಹಳ ಕುತೂಹಲಕರವಾದುದು" ಅವರಲ್ಲಿ ಕುತೂಹಲವನ್ನು ಹುಟ್ಟಿಸುವಂತೆ ಹೇಳಿದರು ಉಪಾಧ್ಯಾಯರು.

"ಹೇಳಿ ಸಾರ್ ಆ ಕಥೆ" ವಿದ್ಯಾರ್ಥಿಗಳು ಆಸಕ್ತಿಯಿಂದ ಕೇಳಿದರು.

"ಹೇಳ್ತೇನೆ. ಆದರೆ ಅದಕ್ಕೆ ಮೊದಲು ಈ ಕವಿ ಮತ್ತು ಕಾವ್ಯದ ವಿಷಯ ತಿಳಿದುಕೊಳ್ಳಬೇಕು ಅಂತ ಅನಿಸೋದಿಲ್ಲವೆ?" ವಿದ್ಯಾರ್ಥಿಗಳ ಗಮನವನ್ನು ಉಪಾಧ್ಯಾಯರು ಆ ಕಡೆ ಸೆಳೆದರು.

"ಹೌದು ಮೊದಲು ಅದನ್ನು ತಿಳಿದುಕೋಬೇಕು: ಆಮೇಲೆ ಕಥೆ" ಹುಡುಗರು ಒಪ್ಪಿದರು.

"ಸರಿ, ಕೇಳಿ ಹಾಗಾದ್ರೆ. ಆಂಡಯ್ಯ ಜೈನ ಕವಿ. ಆತನ ಹೆಸರೇ ನಿಮಗೆ ಆಶ್ಚರ್ಯಕರವಾಗಿ ಕಾಣಬಹುದು.'ಆಂಡಯ್ಯ' ಎಂದರೇನು? ಆ ರೂಪ ಹೇಗೆ ಬಂದಿರಬಹುದು?—ಎಂಬುದನ್ನು ವಿದ್ವಾಂಸರು ಚರ್ಚಿಸಿದ್ದಾರೆ. ತಮಿಳಿನಲ್ಲಿ 'ಆಂಡ' ಎಂಬ ಶಬ್ದವಿದೆ. ಅದರ ಅರ್ಥ ಆಳಿದವನು ಎಂದಾಗುತ್ತದೆ. 'ಅಯ್ಯ" ಎಂದರೆ ಸ್ವಾಮಿ. ಆದ್ದರಿಂದ ಆಂಡಯ್ಯ (ಆಂಡ ಅಯ್ಯ) ಎಂದರೆ 'ಆಳಿದಸ್ವಾಮಿ' ಎಂದಾಗುತ್ತದೆ.

ಆದರೆ ಈತ ಜೈನ ಎಂಬುದನ್ನು ನಾವು ಮರೆಯುವಂತಿಲ್ಲ. ಜೈನರಲ್ಲಿ ಈ ಅರ್ಥದ ಹೆಸರು ರೂಢಿಯಲ್ಲಿಲ್ಲ. ಆ ದೃಷ್ಟಿ

ಯಿಂದ ಇದನ್ನು ನೋಡಬೇಕಾಗುತ್ತದೆ. 'ಅಂಡ' ಎನ್ನುವ ಮಾತನ್ನು ನೀವು ಕೇಳಿದ್ದೀರಿ. 'ಅಂಡ' ಎಂದರೆ ಮೊಟ್ಟೆ. ಇದರಿಂದಲೇ ಬ್ರಹ್ಮಾಂಡ ಎಂಬ ಮಾತು ಬರುತ್ತದೆ. ಅಂಡಕ್ಕೆ ಅಯ್ಯ ಅಂಡಯ್ಯ, ಎಂದರೆ ಬ್ರಹ್ಮಯ್ಯ ಎಂದಾಗುತ್ತದೆ. ಬ್ರಹ್ಮಯ್ಯ, ಬ್ರಹ್ಮಪ್ಪ, ಭರ್ಮಯ್ಯ—ಈ ಮೊದಲಾದ ಹೆಸರುಗಳು ಜೈನರಲ್ಲಿ ವಾಡಿಕೆಯಾಗಿವೆ. ಆದುದರಿಂದ ಅಂಡಯ್ಯ ಎಂಬ ರೂಪವೇ ಮೂಲವಾಗಿದ್ದು ಅದು ಆಂಡಯ್ಯ ಆಗಿ ಪರಿಣಮಿಸಿದೆ ಎಂದು ಇಟ್ಟುಕೊಳ್ಳಬಹುದು.

ಈತನ ಅಜ್ಜನ ಹೆಸರೂ ಆಂಡಯ್ಯ ಎಂಬುದೇ. ಅಜ್ಜನ ಹೆಸರನ್ನು ಮೊಮ್ಮಗನಿಗೆ ಇಡುವುದು ಬಹಳ ಸಹಜವಾದದ್ದು. ಈಗಲೂ ಅಂತಹ ಉದಾಹರಣೆಗಳನ್ನು ಕಾಣಬಹುದು. ಕವಿ ಆಂಡಯ್ಯ ತನ್ನ ಅಜ್ಜ ಆಂಡಯ್ಯನ ಗುಣಗಳನ್ನು ಮತ್ತು ತನ್ನ ತಂದೆ ತಾಯಿಗಳ ವಿಷಯವನ್ನೂ ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

ಆ ಹಿರಿಯ ಆಂಡಯ್ಯನಿಗೆ ಸಾಂತ, ಗುಮ್ಮಟ, ವೈಜಣ ಎಂಬ ಮೂವರು ಮಕ್ಕಳು. ಅವರಲ್ಲಿ ಹಿರಿಯ ಮಗ ಸಾಂತ. ಅವನ ಹೆಂಡತಿ ಬಲ್ಲವ್ವೆ; ಈ ದಂಪತಿಗಳ ಮಗ ನಮ್ಮ ಕವಿ ಆಂಡಯ್ಯ. ತಂದೆ ತಾಯಿಗಳ ಪ್ರೀತಿಯ ಪುತ್ರನಾಗಿ, ಎತ್ತಿದವರ ಕೈಯ ಮಣಿಯಾಗಿ, ಸೊಬಗಿನ ಕಣಿಯಾಗಿ ಬೆಳೆದ.

ಚಿಕ್ಕಂದಿನಿಂದಲೇ ಅರುಹಂತನ ಪಾದಕಮಲಗಳು ಆತನ ಹೃದಯ ಕಮಲದಲ್ಲಿ ನೆಲಸಿದವು. ಅಂದರೆ ಜಿನನ ಮೇಲಿನ ಭಕ್ತಿ ಆತನಲ್ಲಿ ಬಾಲ್ಯದಿಂದಲೂ ಬೆಳೆದು ಬಂದಿತು. ತನ್ನನ್ನು ಕುರಿತ ಈ ಎಲ್ಲ ವಿಷಯಗಳನ್ನೂ ಕವಿ, ಕಾವ್ಯದ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾನೆ.

ತನ್ನ ಅಜ್ಜನ ಹೆಸರನ್ನು ಹೇಳುವಾಗ 'ಲೆಕ್ಕಿಗರ ಪಿರಿಯ' ಎಂದು ಆತನನ್ನು ಕರೆಯುತ್ತಾನೆ. ಅಂತೆಯೇ ತನ್ನನ್ನು 'ಲೆಕ್ಕಿಗರ ಅರಸ' ಎಂದು ಕರೆದುಕೊಂಡಿದ್ದಾನೆ. ಇದರ ಮೇಲಿಂದ ಆತ ಸೇನಬೋವ ಅಥವಾ ಕರಣಿಕ ವಂಶದವನಾಗಿದ್ದಿರಬೇಕೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಕೆಲವರು ಈ ಮಾತನ್ನು ಒಪ್ಪದೆ 'ಲೆಕ್ಕಿಗರ ಪಿರಿಯ' ಎಂದರೆ ವಿದ್ವಾಂಸರಲ್ಲಿ ಶ್ರೇಷ್ಠನಾದವನು ಎಂದು ಅರ್ಥಮಾಡುತ್ತಾರೆ.

ವಾಸ್ತವವಾಗಿ ಲೆಕ್ಕಿಗ ಎಂಬ ಶಬ್ದ "ಲೇಖನಿಕಃ' ಎಂಬ ಸಂಸ್ಕೃತ ಶಬ್ದದಿಂದ ಬಂದದ್ದು. ಅದಕ್ಕೆ ಬರಹಗಾರ. ಕರಣಿಕ ಎಂದು ಅರ್ಥ ಹೇಳಬಹುದು. ಆದುದರಿಂದ ಬಹುಶಃ ಆಂಡಯ್ಯ ಕರಣಿಕ ವಂಶಕ್ಕೆ ಸೇರಿದವನೆಂದು ಹೇಳಬಹುದಾಗಿದೆ.

ಇನ್ನು ಇವನ ಕಾಲವನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬಹುದು. ನಮ್ಮ ಕೆಲವು ಕವಿಗಳು ತಾವು ಕಾವ್ಯವನ್ನು ಬರೆದ ಕಾಲವನ್ನು ಹೇಳಿಕೊಂಡಿದ್ದಾರೆ. ಅಂತಹ ಕವಿಗಳ ಕಾಲದ ವಿಚಾರದಲ್ಲಿ ಚರ್ಚೆಗೆ ಅವಕಾಶವಿಲ್ಲ. ಉದಾಹರಣೆಗೆ ಪಂಪ. ಆತ ತಾನು ಹುಟ್ಟಿದ ವರ್ಷವನ್ನೂ ಕಾವ್ಯ ಬರೆದ ವರ್ಷವನ್ನೂ ಹೇಳಿದ್ದಾನೆ. ಹೀಗೆ ಎಲ್ಲ ಕವಿಗಳೂ ಹೇಳಿಲ್ಲ. ಅನೇಕ ಕವಿಗಳು ತಮ್ಮ ಕಾಲನಿರ್ಧಾರದ ಯಾವ ಸೂಚನೆಯನ್ನೂ ಕೊಡುವುದಿಲ್ಲ. ಉದಾಹರಣೆಗೆ ನಾರಣಪ್ಪ...ನಾರಣಪ್ಪ ಅಂದ್ರೆ ಯಾರು ಗೊತ್ತು ತಾನೆ?" ನಿರೂಪಣೆಯಲ್ಲಿ ತೊಡಗಿದ್ದ ಉಪಾಧ್ಯಾಯರು ಈ ಪ್ರಶ್ನೆ ಕೇಳಿದರು.

ಹುಡುಗರು ಸ್ವಲ್ಪಕಾಲ ಮೌನವಾಗಿದ್ದರು. ಪುನಃ ಉಪಾಧ್ಯಾಯರೇ ಪ್ರಶ್ನಿಸಿದರು ;

"ಗದುಗಿನ ನಾರಣಪ್ಪ ಅಂದ್ರೆ ಯಾರು ಅಂತ ಗೊತ್ತಿಲ್ವೆ?" ಈಗ ತಟ್ಟನೆ ಬಂತು ಉತ್ತರ :

"ಓ ! ಗೊತ್ತಾಯ್ತು ಸಾರ್. ಕುಮಾರವ್ಯಾಸ ಅಲ್ವೆ ಸಾರ್ ? ಗದುಗು ಅಂದಕೂಡ್ಲೆ ಜ್ಞಾಪಕಕ್ಕೆ ಬಂತು ; ಗದುಗಿನ ಭಾರತ ಅಂತ ಅಂತಿದ್ರು ನಮ್ಮ ತಂದೆ."

"ಹೌದು, ಕುಮಾರವ್ಯಾಸ ಎಂದು ಆತ ಪ್ರಸಿದ್ಧನಾಗಿದ್ದಾನೆ. ಆತ ತನ್ನ ಕಾಲದ ವಿಚಾರವಾಗಿ ಏನೂ ಹೇಳಿಕೊಂಡಿಲ್ಲ. ಅದು ಚರ್ಚೆಗೆ ಅವಕಾಶವನ್ನುಂಟು ಮಾಡಿದೆ. ಹಾಗೆ ಆಂಡಯ್ಯನ ಕಾಲವೂ ಚರ್ಚಾಸ್ಪದವಾಗಿದೆ. ಆ ಚರ್ಚೆಯೆಲ್ಲಾ ನಿಮಗೆ ಬೇಕಿಲ್ಲ. ಅದನ್ನೆಲ್ಲಾ ಕೈ ಬಿಟ್ಟು ಒಟ್ಟು ಅದರ ತೀರ್ಮಾನವನ್ನು ಹೇಳಬಹುದಾದರೆ ಈತ ತನ್ನ ಕಾವ್ಯವನ್ನು ಬರೆದದ್ದು ಕ್ರಿ.ಶ.೧೨೧೭ರ ಸುಮಾರಿಗೆ ಎಂದು ಹೇಳಬಹುದು. ಹಾಗಾದರೆ ಈತ ಎಷ್ಟನೇ ಶತಮಾನದಲ್ಲಿದ್ದವನೆಂದು ಹೇಳುತ್ತೀರಾ ?"

"ಹನ್ನೆರಡನೇ ಶತಮಾನ ಸಾರ್" ಧೈರ್ಯದಿಂದ ಹೇಳಿದ ಒಬ್ಬ ಹುಡುಗ.

"ಹೇಗೆ ? ಸ್ವಲ್ಪ ವಿವರಿಸಿ ಹೇಳು ನೋಡೋಣ" ಉಪಾಧ್ಯಾಯರು ಕೇಳಿದರು.

"ಒಂದು ಸಾವಿರದ ಇನ್ನೂರ ಹದಿನೇಳು ಅಂದಿರಿ. ಸಾವಿರದ ಇನ್ನೂರು ಅಂದರೆ ಹನ್ನೆರಡು ನೂರು, ಆದ್ದರಿಂದ ಹನ್ನೆರಡನೇ ಶತಮಾನ."

"ಹಾಗೋ ? ಹಾಗಾದ್ರೆ ನಾನು ಇನ್ನೊಂದು ಪ್ರಶ್ನೆ ಕೇಳ್ತೀನೆ. ಈಗ ನಾವಿರುವುದು ಎಷ್ಟನೇ ಶತಮಾನ ?

"ಇಪ್ಪತ್ತನೇ ಶತಮಾನ"

"ಎಷ್ಟನೇ ಇಸವಿ ?" ಮತ್ತೆ ಉಪಾಧ್ಯಾಯರ ಪ್ರಶ್ನೆ.

"ಒಂದು ಸಾವಿರದ ಒಂಬಯ್ನೂರ ಎಪ್ಪತ್ತೆರಡು"

"ನಿನ್ನ ಕ್ರಮವನ್ನೇ ಹಿಡಿದು ಹೇಳುವುದಾದರೆ ಎಷ್ಟನೇ ಶತಮಾನವಾಗಬೇಕು ನೋಡು....ಸಾವಿರದ ಒಂಬೈನೂರು ಎಂದರೆ ಹತ್ತೊಂಬತ್ತುನೂರು. ಆದ್ದರಿಂದ ೧೯ನೇ ಶತಮಾನ ಆಗಬೇಕಲ್ಲವೇ ?"

ಹುಡುಗ ಆಲೋಚನೆಯಲ್ಲಿ ತೊಡಗಿದ. ಆತ ತೊಡಕಿನಲ್ಲಿ ಬಿದ್ದಂತಿತ್ತು. ಮತ್ತೆ ಉಪಾಧ್ಯಾಯರು ಆತನ ಸಹಾಯಕ್ಕೆ ಬಂದರು

"ನೋಡು, ಸಾವಿರದ ಒಂಬೈನೂರರವರೆಗೆ ಹತ್ತೊಂಬತ್ತನೇ ಶತಮಾನ. ಅಲ್ಲಿಂದ ಮುಂದಿನ ವರ್ಷಗಳು ಒಂದೊಂದೂ ಇಪ್ಪತ್ತನೇ ಶತಮಾನದ ವರ್ಷಗಳು. ಈಗ ಈ ಶತಮಾನದಲ್ಲಿ ಎಪ್ಪತ್ತೆರಡನೇ ವರ್ಷದಲ್ಲಿದ್ದೇವೆ. ಹಾಗೇ ೧೯೦೫ ಅಂದ್ರೆ ಏನು ಹೇಳು ?"

"ಇಪ್ಪತ್ತನೇ ಶತಮಾನದಲ್ಲಿ ಐದನೇ ವರ್ಷ ಅಂತ ಸಾರ್"

"ಸರಿ ಹಾಗೆ ೧೨೧೭ ಅಂದ್ರೆ ಎಷ್ಟಾಯ್ತು ಈಗ ಹೇಳು."

"ಹದಿಮೂರನೇ ಶತಮಾನದಲ್ಲಿ ಹದಿನೇಳನೇ ವರ್ಷ." ಈಗ ಸರಿಯಾಗಿ ಹೇಳಿದ ಹುಡುಗ.

"ಹೌದು, ಕವಿ ಆಂಡಯ್ಯ ಹದಿಮೂರನೇ ಶತಮಾನದ ಕವಿ. ಹದಿಮೂರನೇ ಶತಮಾನದ ಪ್ರಾರಂಭದಲ್ಲಿದ್ದವನು. ನಮಗಿಂತ ಏಳು ಶತಮಾನಗಳು ಅಂದರೆ ಸುಮಾರು ಏಳು ನೂರು ವರ್ಷ ಹಿಂದೆ ಇದ್ದವನು. ಇವನು ಇದ್ದದ್ದು ಆಗ ಬನವಾಸಿ, ಹಾನುಂಗಲ್ಲುಗಳಲ್ಲಿ ರಾಜ್ಯವಾಳುತ್ತಿದ್ದ ಕಾಮ



ದೇವ ಎಂಬ ರಾಜನ ಆಸ್ಥಾನದಲ್ಲಿ. ಕಾಮದೇವ ಕದಂಬ ವಂಶದಲ್ಲಿ ಪ್ರಸಿದ್ಧನಾದ ದೊರೆ. ಈತನ ಆಶ್ರಯದಲ್ಲಿದ್ದ ಆಂಡಯ್ಯ, ಈತನನ್ನೇ ಕಥಾನಾಯಕನನ್ನಾಗಿ ಮಾಡಿಕೊಂಡು ನಮ್ಮ ಪುರಾಣದ ಕಾಮನೊಡನೆ ಆತನನ್ನು ಹೋಲಿಸಿ ಕಾವ್ಯವನ್ನು ಬರೆದಿರುವಂತೆ ತೋರುತ್ತದೆ.

ಕಬ್ಬಿಗರ ಕಾವ

"ಯಾವುದು ಸಾರ್ ಆತ ಬರೆದ ಕಾವ್ಯ?" ಒಬ್ಬ ವಿದ್ಯಾರ್ಥಿ ಕೇಳಿದ.

"ಅಲ್ಲಿಗೇ ಬರುತ್ತಿದ್ದೇನೆ. ಈಗ ನಾವು ಕವಿಯನ್ನು ಬಿಟ್ಟು ಕಾವ್ಯದ ಕಡೆಗೆ ಹೋಗುತ್ತಿದ್ದೇವೆ. ಇದನ್ನು ಕುರಿತು ಒಂದೆರಡು ಮಾತುಗಳನ್ನು ಹೇಳುತ್ತೇನೆ, ಸ್ವಲ್ಪ ಸಹನೆಯಿಂದ ಕೇಳಿ. ಅನಂತರ ಕಾವ್ಯದ ಕಥೆಯ ಭಾಗಕ್ಕೆ ನೇರವಾಗಿ ಇಳಿಯಬಹುದು."

"ಆಂಡಯ್ಯನ ಕಾವ್ಯ ಈಗ 'ಕಬ್ಬಿಗರ ಕಾವ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಆದರೆ ಇದರ ಈ ಹೆಸರಿನ ವಿಚಾರದಲ್ಲಿ ಸ್ವಲ್ಪ ತೊಡಕಿದೆ. ಕವಿ ಇದಕ್ಕೆ ಕೊಟ್ಟ ಹೆಸರೇನೆಂಬುದು ಸ್ಪಷ್ಟವಾಗುವಂತಿಲ್ಲ."

"ಯಾಕೆ ಸಾರ್, ಕಾವ್ಯದಲ್ಲಿ ಅದರ ಹೆಸರನ್ನು ಆತ ಹೇಳಿಲ್ವೇ?" ಕೇಳಿದ ಒಬ್ಬ ಹುಡುಗ.

"ಹೇಳಿದ್ದಾನೆ, ಆದರೆ ಅದು ಸಂದಿಗ್ಧವಾಗಿದೆ. ಕಾವ್ಯದ ಮೊದಲಲ್ಲಿ 'ಕಬ್ಬಿಗರ ಕಾವ' ಎಂಬ ಮಾತಿದೆ. ಆದರೆ ಕಾವ್ಯದ ಕೊನೆಯಲ್ಲಿ ಬಂದಿರುವ ಗದ್ಯದಲ್ಲಿ 'ಕಾವನಗೆಲ್ಲಂ' ಎಂದು ತನ್ನ ಕೃತಿಯನ್ನು ಕರೆದಿದ್ದಾನೆ. ಇದು ಚರ್ಚೆಗೆ ಎಡೆಮಾಡಿಕೊಟ್ಟಿದೆ.

ಕೆಲವರು ಹೇಳುವುದು 'ಕಬ್ಬಿಗರ ಕಾವಂ' ಎಂಬುದೇ ಕಾವ್ಯದ ಹೆಸರು ಎಂದು. ಈ ಮಾತಿನ ಅರ್ಥವನ್ನು

ಮೊದಲು ನೋಡೋಣ. ಕಬ್ಬಿಗ ಅಂದರೆ ಕವಿ; ಕವಿಗಳನ್ನು ಕಾಪಾಡಿದವನು; ಅಥವಾ ಕಾಪಾಡುವವನು, ಕಬ್ಬಿಗರ ಕಾವ. ನಿಜವಾಗಿ ನೋಡಿದರೆ ಇದು ಕವಿಯ ಬಿರುದು ಎಂಬಂತೆ ತೋರುತ್ತದೆ. ಈ ಬಿರುದನ್ನು ಆತ ಪಡೆಯುವುದಕ್ಕೆ ಕಾರಣವೂ ಇದೆ :

ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲನೆಯ ಬಾರಿಗೆ ಅಪೂರ್ವ ಸಾಹಸವನ್ನು ಮಾಡಿತೋರಿಸಿ ಈತ ಈ ಬಿರುದನ್ನು ಪಡೆದಿದ್ದಾನೆ. ಆ ಸಾಹಸ ಯಾವುದೆಂದರೆ ಒಂದೂ ಸಂಸ್ಕೃತ ಶಬ್ದವನ್ನು ಬಳಸದೆ ಇಡೀ ಕಾವ್ಯವನ್ನು ಬರೆದಿರುವುದು.

ಕನ್ನಡದ ಕವಿಗಳು ತಮ್ಮ ಕಾವ್ಯಗಳಲ್ಲಿ ಸಂಸ್ಕೃತ ಶಬ್ದವನ್ನು ಮೊದಲಿನಿಂದಲೂ ಬಳಸುತ್ತಾ ಬಂದಿದ್ದರು. ಬರುಬರುತ್ತ ಕೆಲವು ಕವಿಗಳಲ್ಲಿ ಅದು ಅತಿ ಹೆಚ್ಚಾಗಿ ಪರಿಣಮಿಸಿತು.

ಆಗ ಕೆಲವು ಕವಿಗಳು ಅದನ್ನು ಪ್ರತಿಭಟಿಸಿದರು : ಕನ್ನಡದಲ್ಲಿ ಅತಿಯಾಗಿ ಸಂಸ್ಕೃತವನ್ನು ಬೆರಸುವುದು ತುಪ್ಪ ಎಣ್ಣೆ ಬೆರೆಸಿದಂತಾಗುತ್ತದೆ ಎಂದು ಅದನ್ನು ವಿರೋಧಿಸಿದರು. ಇನ್ನು ಕೆಲವರು ಹಿತಮಿತವಾಗಿ ಸಂಸ್ಕೃತ ಬೆರೆಯುವುದನ್ನು ಒಪ್ಪಿದರು. ಅದು ಕೆಂಪುಹವಳಗಳ ಮಧ್ಯದಲ್ಲಿ ಕರಿಮಣಿಯನ್ನು ಪೋಣಿಸಿದಂತಾಗುತ್ತದೆ ಎಂದು ಮೆಚ್ಚಿದರು.

ಆದರೆ ಆಂಡಯ್ಯ ಇದನ್ನು ವಿರೋಧಿಸುವ ದಿಕ್ಕಿನಲ್ಲಿ ಇನ್ನೊಂದು ಕೊನೆಗೆ ಹೋದವನು; ಒಂದೂ ಸಂಸ್ಕೃತ ಶಬ್ದವನ್ನು ಬಳಸದೆ ಅಚ್ಚ ಕನ್ನಡದಲ್ಲಿಯೇ ಕಾವ್ಯವನ್ನು ಬರೆಯುತ್ತೇನೆಂಬ ವೀರನಿಷ್ಠೆಯಿಂದ ಹೊರಟವನು ; ಮತ್ತು

ಆದನ್ನು ಸಾಧಿಸಿ ತೋರಿಸಿದವನು. ಈತನ ಈ ಕಾವ್ಯದಲ್ಲಿ ಒಂದಾದರೂ ಸಂಸ್ಕೃತ ಪದವಿಲ್ಲ. ಸಂಸ್ಕೃತದಿಂದ ಬಂದ ತದ್ಭವಗಳನ್ನು ಧಾರಾಳವಾಗಿ ಬಳಸಿದ್ದಾನೆ. ಆದರೆ ನೇರ ವಾಗಿ ಒಂದಾದರೂ ಸಂಸ್ಕೃತ ಶಬ್ದವನ್ನು ಪ್ರಯೋಗಿಸದೆ ಕಾವ್ಯವನ್ನು ರಚಿಸುವುದು ಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದ ಕೀರ್ತಿ ಈತನದು.

ಈ ಮೂಲಕ ಕನ್ನಡ ಕವಿಗಳ ಹಿರಿಮೆಯನ್ನು ಆಂಡಯ್ಯ ಕಾಪಾಡಿದ್ದಾನೆ. ಇದರಿಂದ ಈತನಿಗೆ 'ಕಬ್ಬಿಗರ ಕಾವಂ' ಎಂಬ ಬಿರುದು ಬಂದಿರಬಹುದು. ಈ ಬಿರುದಿ ನಿಂದಲೇ ಕಾವ್ಯವನ್ನು ಕರೆದಿದ್ದಾನೆ. ಆದುದರಿಂದ 'ಕಬ್ಬಿಗರ ಕಾವ' ಎಂಬುದು ಕಾವ್ಯದ ಹೆಸರೂ ಆಗುತ್ತದೆ-ಇದು ಒಂದು ಅಭಿಪ್ರಾಯ.

ಇನ್ನೊಂದು ಅಭಿಪ್ರಾಯ: ಈ ಕಾವ್ಯದ ಹೆಸರು 'ಕಾವನ ಗೆಲ್ಲಂ' ಎಂಬುದು. ಬಹುಶಃ ಈ ವಿಚಾರದಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ ಎನ್ನಬಹುದು. ಕಾವ್ಯದ ಕೊನೆಯಲ್ಲಿ ಬರುವ ಗದ್ಯದಲ್ಲಿ ಕವಿ ಸ್ಪಷ್ಟವಾಗಿ ಈ ಹೆಸ ರನ್ನು ಹೇಳಿದ್ದಾನೆ. 'ಕಾವನ ಗೆಲ್ಲ' ಅಂದರೆ ಕಾಮನ ಗೆಲುವು. ಇದರ ಸಂಸ್ಕೃತ ರೂಪ 'ಮನ್ಮಥ ವಿಜಯ' ಅಥವಾ 'ಮದನ ವಿಜಯ'. ಆ ಕಾಲದ ಚಾರಿತ್ರಿಕ ಅಂಶಗಳನ್ನು ಗಮನಿಸಿ ನೋಡಿದರೆ ಈ ಹೆಸರೇ ಹೆಚ್ಚು ಉಚಿತವೂ ಸೂಕ್ತವೂ ಆಗಿರುವಂತೆ ತೋರುತ್ತದೆ.

ಹಿಂದೆ ಆಗಲೇ ನಾನು ಹೇಳಿದ್ದೇನೆ. ಹಾನುಂಗಲ್ಲಿನ ಕದಂಬರಾಜ ಕಾಮದೇವನ ಆಸ್ಥಾನದಲ್ಲಿದ್ದವನು ಆಂಡಯ್ಯ. ತನ್ನ ರಾಜನನ್ನು ಪುರಾಣದ ಕಾಮನೊಡನೆ ಅಂದರೆ ಮನ್ಮಥನೊಡನೆ ಹೋಲಿಸಿ ಈ ಕಥೆ ಬರೆದಿದ್ದಾನೆ. ಹೀಗೆ

ತಮ್ಮ ರಾಜನನ್ನು ಇತಿಹಾಸ ಅಥವಾ ಪುರಾಣದ ವ್ಯಕ್ತಿಗಳೊಡನೆಹೋಲಿಸಿ ಬರೆದಿರುವುದು ಕನ್ನಡಕ್ಕೆ ಹೊಸದೇನೂ ಅಲ್ಲ. ಆದಿಕವಿ ಪಂಪನೇ ಅದಕ್ಕೆ ಮಾರ್ಗದರ್ಶಕನಾಗಿದ್ದಾನೆ. ಪಂಪನ ಹೆಸರನ್ನು ಆಗ ನೀವು ಹೇಳಿದಿರಿ. ಆತ ಯಾವ ಕಾವ್ಯಗಳನ್ನು ಬರೆದಿದ್ದಾನೆ ನಿಮಗೆ ಗೊತ್ತೇನು?" –ಎಂದು ಉಪಾಧ್ಯಾಯರು ಗಹನವಾಗುತ್ತಿದ್ದ ನಿರೂಪಣೆಯನ್ನು ಸಂಭಾಷಣೆಯತ್ತ ಎಳೆದರು.

ಇಡೀ ತರಗತಿ ಸ್ವಲ್ಪಕಾಲ ಮೌನವಾಗಿ ಆಲೋಚಿಸಿತು. ಅನಂತರ ಒಬ್ಬ ಅನುಮಾನಿಸುತ್ತ ಹೇಳಿದ.

"ಪಂಪಭಾರತ ಅಂತಾರಲ್ಲ ಸಾರ್...."

"ಹೌದು ; ಭಾರತವನ್ನು ಆತ ಬರೆದಿದ್ದಾನೆ. ಇದಲ್ಲದೆ ಆದಿಪುರಾಣವನ್ನೂ ಬರೆದಿದ್ದಾನೆ. ಅದು ಹಾಗಿರಲಿ. ಆತ ಬರೆದ ಭಾರತಕ್ಕೆ ಕೊಟ್ಟ ಹೆಸರೇನು ಗೊತ್ತೆ? ನಾವದನ್ನು ಪಂಪಭಾರತ ಎಂದು ಕರೆಯುತ್ತೇವೆ. ಆದರೆ ಅದಕ್ಕೆ ಕವಿ ಇಟ್ಟಿರುವ ಹೆಸರು ಬೇರೆಯಿದೆ. ಏನು ಹೇಳುತ್ತೀರಾ?"

ಯಾರಿಂದಲೂ ಉತ್ತರ ಬರಲಿಲ್ಲ. ಮತ್ತೆ ಉಪಾಧ್ಯಾಯರೇ ಹೇಳಿದರು ; "ಕವಿ ಅದನ್ನು 'ವಿಕ್ರಮಾರ್ಜುನ ವಿಜಯ' ಎಂದು ಕರೆದಿದ್ದಾನೆ. ಹೆಸರ ಮೇಲಿಂದ ಹೇಳಬಹುದಾದರೆ ಇಲ್ಲಿ ಯಾವ ಪಾತ್ರ ಪ್ರಧಾನವಾಗಿರಬಹುದು ಊಹಿಸಿ"

"ಅರ್ಜುನನ ಪಾತ್ರ ಸಾರ್" ವಿದ್ಯಾರ್ಥಿಗಳು ಹೇಳಿದರು.

"ನಿಜ; ಪಂಪ ಇಲ್ಲಿ ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡಿದ್ದಾನೆ. ಮತ್ತು ತನ್ನ ರಾಜನನ್ನು, ಅಂದರೆ ಆತ ಇದ್ದುದ್ದು ಚಾಲುಕ್ಯ ಅರಿಕೇಸರಿಯ ಆಸ್ಥಾನದಲ್ಲಿ ; ಆ

ಅರಿಕೇಸರಿಯನ್ನು ಅರ್ಜುನನೊಡನೆ ಹೋಲಿಸಿ ಕಾವ್ಯವನ್ನು ಬರೆದಿದ್ದಾನೆ. ಅರ್ಜುನ ಬಂದಲ್ಲೆಲ್ಲಾ ತನ್ನ ರಾಜನ ಬಿರುದು ಗಳನ್ನು ಹೇಳುತ್ತಾನೆ ಮತ್ತು ಆತನ ಪರಾಕ್ರಮವನ್ನು ದೀರ್ಘವಾಗಿ ವರ್ಣಿಸುತ್ತಾನೆ. ಆ ಮೂಲಕ ತನ್ನ ರಾಜನ ಹಿರಿಮೆಯನ್ನು ಎತ್ತಿ ಹಿಡಿದಿದ್ದಾನೆ. ಅದಕ್ಕನುಗುಣವಾಗಿ ಕಥೆಯಲ್ಲಿ ಅಲ್ಲಲ್ಲಿ ಬದಲಾವಣೆಗಳನ್ನೂ ಮಾಡಿಕೊಂಡಿ ದ್ದಾನೆ.

ಇದು ಮುಂದೆ ಅನೇಕ ಕವಿಗಳಿಗೆ ಮಾರ್ಗದರ್ಶಕ ವಾಯಿತು. ರನ್ನ ತನ್ನ ರಾಜ ಸತ್ಯಾಶ್ರಯನನ್ನು ಭೀಮ ನೊಡನೆ ಹೋಲಿಸಿ 'ಗದಾಯುದ್ಧ'ವನ್ನು ಬರೆದ; ಮತ್ತು ಅದನ್ನು 'ಸಾಹಸ ಭೀಮವಿಜಯ' ಎಂದು ಕರೆದ. ಸ್ವಲ್ಪ ಹೆಚ್ಚು ಕಡಮೆ ಆಂಡಯ್ಯನೂ ಈ ಮಾರ್ಗದಲ್ಲಿ ನಡೆದಿ ದ್ದಾನೆ.

ಈತ ತನಗೆ ಆಶ್ರಯವನ್ನಿತ್ತ ಕದಂಬರಾಜ ಕಾಮ ದೇವನನ್ನು ಸಾಕ್ಷಾತ್ ಮನ್ಮಥನೊಡನೆ ಹೋಲಿಸಿ ಬರೆದಂತೆ ತೋರುತ್ತದೆ. ಎಚ್ಚರಿಕೆಯಿಂದ ಅದನ್ನು ಓದಿದರೆ ಐತಿ ಹಾಸಿಕ ಸಂಗತಿಗಳು ಅಲ್ಲಿ ಅಡಗಿರುವುದು ಕಾಣುತ್ತದೆ. ಹೊಯ್ಸಳರನ್ನು ಕಾಮದೇವ ಎದುರಿಸಿ ಸೋಲಿಸಿದ ಸೂಚ ನೆಯೂ ಇಲ್ಲಿದೆಯೆಂದು ಹೇಳಬಹುದು.

ಆಗ ಹೊಯ್ಸಳ ರಾಜನಾಗಿದ್ದವನು ಪ್ರಸಿದ್ಧ ವೀರ ಬಲ್ಲಾಳ. ಆತನ ಆಸ್ಥಾನದಲ್ಲಿಯೇ ಪ್ರಸಿದ್ಧನಾದ ಕನ್ನಡ ಕವಿಯೊಬ್ಬನಿದ್ದ. ಆತನ ಹೆಸರು ರುದ್ರಭಟ್ಟ. 'ಜಗನ್ನಾಥ ವಿಜಯ' ಎಂಬ ಕಾವ್ಯವನ್ನು ರುದ್ರಭಟ್ಟ ಬರೆದಿದ್ದಾನೆ. ಅದರ ಮೊದಲನೆಯ ಪದ್ಯದಲ್ಲಿ ತನ್ನ ರಾಜನಾದ ವೀರ ಬಲ್ಲಾಳನನ್ನು ಸೂಚ್ಯವಾಗಿ ಸ್ಮರಿಸಿದ್ದಾನೆ.

ಈ 'ಜಗನ್ನಾಥ ವಿಜಯ'ಕ್ಕೆ ಪ್ರತಿಸ್ಪರ್ಧಿಯೋ ಎಂಬಂತೆ ಆಂಡಯ್ಯ ತನ್ನ ರಾಜನಾದ ಕಾಮದೇವನ ವಿಜಯವನ್ನು ಬರೆದಿದ್ದಾನೆ. ಆದುದರಿಂದ ಸಹಜವಾಗಿಯೇ ಈ ಕಾವ್ಯದ ಹೆಸರು 'ಕಾಮದೇವ ವಿಜಯ' ಅಥವಾ 'ಮದನ ವಿಜಯ' ಎಂದಾಗುತ್ತದೆ. ಆದರೆ ಸಂಸ್ಕೃತ ಶಬ್ದಗಳನ್ನು ಬಳಸದೇ ಇರುವ ಆತನ ನಿಷ್ಠೆಯಿಂದ ಅದು 'ಕಾವನ ಗೆಲ್ಲ' ಆಗಿದೆ.

ಆದುದರಿಂದ ಆಂಡಯ್ಯನ ಈ ಕಾವ್ಯದ ಹೆಸರು 'ಕಬ್ಬಿಗರ ಕಾವ' ಎಂಬುದಕ್ಕಿಂತ 'ಕಾವನ ಗೆಲ್ಲಂ' ಎಂಬುದೇ ಹೆಚ್ಚು ಸೂಕ್ತ ಎನ್ನಬಹುದು. ಆದರೆ 'ಕಬ್ಬಿಗರ ಕಾವ' ಎಂಬ ಹೆಸರೇ ಮೊದಲಿನಿಂದ ಪ್ರಸಿದ್ಧವಾಗಿ ಬಂದಿದೆ; ಈಗಲೂ ಅದೇ ಉಳಿದುಕೊಂಡಿದೆ. ಆದುದರಿಂದ ನಾವೂ ಆ ಹೆಸರಿನಿಂದಲೇ ಕರೆಯಬಹುದು.

ಕಬ್ಬಿಗರ ಕಾವದಲ್ಲಿ ಆ ಕಾಲದ ರಾಜಕೀಯ ಘಟನೆಗಳು ಸೂಚ್ಯವಾಗಿ ಬಂದಿವೆ ಎಂಬುದನ್ನು ನೋಡಿದೆವು. ಇಲ್ಲಿ ಆ ರಾಜಕೀಯದ ವಿವರಣೆ ನಿಮಗೆ ಬೇಕಿಲ್ಲ, ಕುತೂಹಲಕರವಾದ ಅದರ ಕಥೆಯ ಭಾಗವನ್ನು ಮಾತ್ರ ನಿಮಗೆ ಹೇಳಬೇಕೆಂದು ಕೊಂಡಿದ್ದೇನೆ. ಈಗ ಆ ಕಥೆಯನ್ನು ಕೇಳಲು ಸಿದ್ಧರಾಗಿರಿ.

ಕಾಮನ ಕಥೆ

ನಮ್ಮ ಪುರಾಣಗಳಲ್ಲಿಯೂ ಕಾಮನ ಕಥೆ ಬರುತ್ತದೆ. ಶಿವ, ಹಣೆಗಣ್ಣಿನ ಉರಿಯಿಂದ ಮನ್ಮಥನನ್ನು ಸುಟ್ಟ ಸನ್ನಿವೇಶವನ್ನು ಬಹುಶಃ ನೀವು ಕೇಳಿದ್ದೀರಿ. ಆಂಡಯ್ಯ ಚಿತ್ರಿ



ಸಿರುವ ಕಾಮನ ಕಥೆಯನ್ನು ನೋಡುವುದಕ್ಕೆ ಮೊದಲು ಪುರಾಣ ಪ್ರಸಿದ್ಧವಾದ ಕಥೆಯನ್ನು ಜ್ಞಾಪಿಸಿಕೊಳ್ಳಬಹುದು.

ತಾರಕ ಎಂಬ ರಾಕ್ಷಸನು ಬ್ರಹ್ಮನಿಂದ ವರಪಡೆದು ಲೋಕಕಂಟಕನಾಗಿ ಪರಿಣಮಿಸುತ್ತಾನೆ. ಆತನ ಹಾವಳಿ



ಮಿತಿಮೀರುತ್ತದೆ. ಆಗ ದೇವತೆಗಳೆಲ್ಲಾ ಸೇರಿ ಬ್ರಹ್ಮನ
ಬಳಿಗೆ ಬಂದು ಮೊರೆಯಿಡುತ್ತಾರೆ. ಶಿವ ಮತ್ತು ಪಾರ್ವತಿ
ಯರಿಗೆ ಹುಟ್ಟುವ ಮಗನಿಂದ ಮಾತ್ರ ತಾರಕಾಸುರನನ್ನು
ಕೊಲ್ಲುವುದು ಸಾಧ್ಯವೆಂದು ಹೇಳುತ್ತಾನೆ. ಆದರೆ ಶಿವ

ಈಗ ತಪಸ್ಸಿಗೆ ಕುಳಿತಿದ್ದಾನೆ. ಅವನ ತಪಸ್ಸನ್ನು ಭಂಗ ಗೊಳಿಸಿ ಗಿರಿಜೆಯೊಡನೆ ಆತನ ಮದುವೆಯಾಗುವಂತೆ ಮಾಡಬೇಕು. ಇದನ್ನು ಮಾಡುವುದು ಹೇಗೆ? ಶಿವನ ತಪಸ್ಸನ್ನು ಭಂಗಗೊಳಿಸುವವರು ಯಾರು ? – ಎಂಬ ಪ್ರಶ್ನೆ ದೇವತೆಗಳ ಮುಂದೆ ಬರುತ್ತದೆ.

ಈ ಕೆಲಸವನ್ನು ಮಾಡಲು ಮನ್ಮಥನೊಬ್ಬನೇ ಸಮರ್ಥ ನೆಂದು ಭಾವಿಸಿದ ಇಂದ್ರ ಆತನನ್ನು ಬರಮಾಡಿಕೊಳ್ಳು ತ್ತಾನೆ. ಶಿವನ ಮನಸ್ಸನ್ನು ಚಂಚಲಗೊಳಿಸಿ ಆತನ ತಪ ಸ್ಸನ್ನು ಕೆಡಿಸಬೇಕೆಂದು ಪ್ರಾರ್ಥಿಸುತ್ತಾನೆ. ಮನ್ಮಥ ಅದಕ್ಕೆ ಸಂತೋಷದಿಂದ ಒಪ್ಪಿಕೊಳ್ಳುತ್ತಾನೆ. ತನ್ನ ಹೆಂಡತಿಯಾದ ರತಿಯನ್ನು ಕರೆದುಕೊಂಡು ಸಕಲ ಪರಿ ವಾರ ಸಮೇತನಾಗಿ ಶಿವನ ಬಳಿಗೆ ಬರುತ್ತಾನೆ.

ಈ ವೇಳೆಗೆ ತಪೋಮಗ್ನನಾದ ಶಿವನ ಹತ್ತಿರಕ್ಕೆ ಗಿರಿಜೆ ಬಂದಿದ್ದಾಳೆ. ತನ್ನ ತಪಸ್ಸಿನಿಂದ ಆತನನ್ನು ಒಲಿಸಿಕೊಳ್ಳ ಬೇಕೆಂಬುದು ಆಕೆಯ ನಿರ್ಧಾರ. ದಿನದಿನವೂ ಬಂದು ಆತ ನನ್ನು ಪೂಜಿಸಿ ಉಪಚರಿಸುತ್ತಿದ್ದಾಳೆ. ಆದರೂ ಶಿವ ಕಣ್ಣು ತೆರೆಯದೆ ತಪಸ್ಸಿನಲ್ಲಿಯೇ ಮಗ್ನನಾಗಿದ್ದಾನೆ.

ಎಂದಿನಂತೆ ಇಂದೂ ಪಾರ್ವತಿ ಶಿವನ ಬಳಿಗೆ ಬರು ತ್ತಾಳೆ. ಇದೇ ಸಮಯವನ್ನು ಕಾಯುತ್ತಿದ್ದ ಕಾಮದೇವ ಹೂಬಾಣಗಳನ್ನು ಶಿವನ ಮೇಲೆ ಪ್ರಯೋಗಿಸುತ್ತಾನೆ. ಇದರಿಂದ ಇದ್ದಕ್ಕಿದ್ದಂತೆ ಶಿವನ ಮನಸ್ಸು ಚಂಚಲವಾಗು ತ್ತದೆ. ಮುಂದೆ ನಿಂತ ಸೌಂದರ್ಯನಿಧಿಯಾದ ಪಾರ್ವತಿ ಯತ್ತ ದೃಷ್ಟಿಹರಿಸುತ್ತಾನೆ. ಅವಳನ್ನು ಮನಸ್ಸಿನಲ್ಲಿಯೇ ಮೆಚ್ಚುತ್ತಾನೆ.

ಆದರೆ ಮರುಕ್ಷಣದಲ್ಲಿಯೇ ಎಚ್ಚೆತ್ತುಕೊಳ್ಳುತ್ತಾನೆ.

'ಇದೇಕೆ ಇಂದು ನನ್ನ ಮನಸ್ಸು ಚಂಚಲವಾಯಿತು?' ಎಂದುಕೊಳ್ಳುತ್ತಾನೆ. ಅದರ ಕಾರಣ ಆತನಿಗೆ ಅರ್ಥವಾಗುತ್ತದೆ. ಸುತ್ತಲೂ ನೋಡುತ್ತಾನೆ. ಈ ವೇಳೆಗೆ ಮನ್ಮಥ ಇನ್ನೊಂದು ಹೂಬಾಣವನ್ನು ಎಳೆದು ಆತನ ಮೇಲೆ ಬಿಡುತ್ತಾನೆ. ಅದು ವಿಫಲವಾಗುತ್ತದೆ. ತನ್ನ ಮೇಲೆ ಬಾಣ ಬಿಡುತ್ತಿರುವ ಮನ್ಮಥನನ್ನು ಶಿವ ನೋಡುತ್ತಾನೆ. ಕೋಪದಿಂದ ಹಣೆಗಣ್ಣನ್ನು ತೆರೆಯುತ್ತಾನೆ. ಅದರಿಂದ ಹೊರಹೊಮ್ಮಿದ ಬೆಂಕಿ ಚಿಮ್ಮಿ ಬಂದು ಕಾಮನನ್ನು ಸುಟ್ಟು ಭಸ್ಮಮಾಡುತ್ತದೆ.

ರತಿ ಗೋಳಾಡುತ್ತಾಳೆ. ದೇವತೆಗಳ ಪ್ರಾರ್ಥನೆಯಂತೆ ಶಿವ ಮತ್ತೆ ಕಾಮನನ್ನು ಬದುಕಿಸುತ್ತಾನೆ. ಆದರೆ ಆತನನ್ನು ಅನಂಗನನ್ನಾಗಿ ಅಂದರೆ ದೇಹವಿಲ್ಲದವನನ್ನಾಗಿ ಮಾಡುತ್ತಾನೆ.

ಇತ್ತ ಪಾರ್ವತಿಗೆ ಶಿವನನ್ನು ಒಲಿಸಿಕೊಳ್ಳಲೇಬೇಕೆಂಬ ಹಟ ಹುಟ್ಟುತ್ತದೆ. ಏಕೈಕ ನಿಷ್ಠೆಯಿಂದ ಆತನನ್ನು ಕುರಿತು ತಪಸ್ಸಿಗೆ ತೊಡಗುತ್ತಾಳೆ. ಭಯಂಕರವಾದ ತಪಸ್ಸು ಮಾಡುತ್ತಾಳೆ. ಅವಳ ತಪಶ್ಶಕ್ತಿಗೆ ಇಡೀ ವಿಶ್ವವೇ ತಲ್ಲಣಗೊಳ್ಳುತ್ತದೆ. ಶಿವ ಅವಳನ್ನು ಅನೇಕ ರೀತಿಯಲ್ಲಿ ಪರೀಕ್ಷಿಸುತ್ತಾನೆ. ಕೊನೆಗೆ ತಾನೇ ವಟುವೇಷದಿಂದ ಬರುತ್ತಾನೆ. ಅವಳ ನಿಷ್ಠೆಗೆ ಮೆಚ್ಚಿ ನಿಜರೂಪವನ್ನು ತೋರುತ್ತಾನೆ; ಕೊನೆಗೆ ಅವಳನ್ನು ಮದುವೆಯಾಗುತ್ತಾನೆ.

ಅವರಿಗೆ ಹುಟ್ಟುವ ಮಗನೇ ಕುಮಾರಸ್ವಾಮಿ, ಅಂದರೆ ಷಣ್ಮುಖ. ಆತನಿಂದ ತಾರಕಾಸುರ ಸಂಹಾರ ನಡೆಯುತ್ತದೆ. ಲೋಕವೆಲ್ಲಾ ಸಂತೋಷಗೊಳ್ಳುತ್ತದೆ.

ಇದು ವೈದಿಕ ಪುರಾಣಗಳಲ್ಲಿ ಬರುವ ಕಥೆ. ಇದನ್ನು

ಕುರಿತು ಅನೇಕ ಕಾವ್ಯಗಳು ಬಂದಿವೆ. ಸಂಸ್ಕೃತದಲ್ಲಿ ಕಾಳಿದಾಸ 'ಕುಮಾರ ಸಂಭವ' ವನ್ನು ಬರೆದಿದ್ದಾನೆ. ಕನ್ನಡದಲ್ಲಿ ಹರಿಹರ 'ಗಿರಿಜಾಕಲ್ಯಾಣ' ವನ್ನು ಬರೆದಿದ್ದಾನೆ. ಇವೆರಡನ್ನು ಇಲ್ಲಿ ಮುಖ್ಯವಾಗಿ ಜ್ಞಾಪಿಸಿಕೊಳ್ಳಬಹುದು. ಆ ಕಾವ್ಯಗಳ ಹೆಸರುಗಳೇ ಸೂಚಿಸುವಂತೆ ಕಾಳಿದಾಸನಿಗೆ ಕುಮಾರ ಸ್ವಾಮಿಯ ಜನನದ ಸನ್ನಿವೇಶ ಮುಖ್ಯವಾದದ್ದು ; ಹರಿಹರನಿಗೆ ಗಿರಿಜೆಯ ಕಲ್ಯಾಣದ ಕಥೆ ಮುಖ್ಯ. ಆ ಉದ್ದೇಶಕ್ಕೆ ಸಹಾಯಕವಾಗುವಂತೆ ಮತ್ತು ಆ ಕವಿಗಳ ಮನೋಧರ್ಮಕ್ಕೆ ಅನುಗುಣವಾಗಿ ಅಲ್ಲಿ ಕಥೆ ಬೆಳೆದಿದೆ.

ಆಂಡಯ್ಯ ಈ ಕಥೆಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡು ಅದರಿಂದ ಹೊಸದೊಂದು ಕಥೆಯನ್ನು ನಿರ್ಮಿಸಿದ್ದಾನೆ. ಬಹುಶಃ ಅವನಿಗಿಂತ ಹಿಂದಿನ ಜೈನಕವಿಗಳಲ್ಲಿ ಈ ಕಥೆಯ ಸೂಚನೆ ಇರುವಂತೆ ತೋರುತ್ತದೆ. ಜೈನ ಪುರಾಣದ ಪರಂಪರೆಗೆ ಅನುಗುಣವಾಗಿ ಅದು ಸೂಚಿತವಾದಂತೆ ಕಾಣುತ್ತದೆ. ಇದನ್ನು ಒಂದು ಕಾವ್ಯವನ್ನಾಗಿ ಬೆಳಸಿ ಕಥೆಯನ್ನು ಆಕರ್ಷಕವಾಗಿ ಹೇಳಿದ ಕವಿ ಆಂಡಯ್ಯ. ಈಗ ಕಥೆಯನ್ನು ನೋಡೋಣ.

ಮೊದಲು ಕಥೆ ಹೀಗೆ ಪ್ರಾರಂಭವಾಗಿ ಅನಂತರ ಕಥೆಯೊಳಗೆ ಕಥೆ ಬೆಳೆಯುತ್ತದೆ :

ನೆನೆಯುಂಬ ಎಂಬ ರಾಜ ; ನಗೆಗಾರ ಎಂಬುವವನು ಅವನ ಗೆಳೆಯ. ರಾಜ ಹಿಂದಿನ ರಾತ್ರಿ ಒಂದು ಕನಸನ್ನು ಕಂಡಿದ್ದಾನೆ. ಬೆಳುದಿಂಗಳ ಬೆಳಕನ್ನು ಹೋಲುವಂತಿದ್ದ ತರುಣಿಯೊಬ್ಬಳನ್ನು ಆತ ಕನಸಿನಲ್ಲಿ ಕಂಡಿದ್ದಾನೆ. ಅದನ್ನು ನಗೆಗಾರನಿಗೆ ತಿಳಿಸುತ್ತಾನೆ. ಅದನ್ನು ಕೇಳಿದ ನಗೆಗಾರ, 'ಕನಸಿನಲ್ಲಿ ಆಕೆಯನ್ನು ನೀನು ಕಂಡದ್ದು ನನಸಿನಲ್ಲಿಯೂ

ಆಕೆಯನ್ನು ಪಡೆಯುವುದರ ಸೂಚನೆ – ಎಂದು ಆ ಕನಸಿನ ಫಲವನ್ನು ಹೇಳುತ್ತಾನೆ.

ಇದನ್ನು ಕೇಳಿ ನನೆಯಂಬನಿಗೆ ಸಂತೋಷವಾಗುತ್ತದೆ. ಆತನನ್ನು ಕರೆದುಕೊಂಡು ಉದ್ಯಾನವನಕ್ಕೆ ಬರುತ್ತಾನೆ. ಆಗ ವಸಂತಕಾಲ. ಮರಗಳೆಲ್ಲಾ ಚಿಗುರಿನಿಂದ ಅಲಂಕೃತವಾಗಿ ಕಂಗೊಳಿಸುತ್ತಿವೆ. ಮಲ್ಲಿಗೆ, ಸುರಗಿ. ಸುರಹೊನ್ನೆ ಮೊದಲಾದ ಹೂವುಗಳ ಕಂಪು ಸುತ್ತಲೂ ವ್ಯಾಪಿಸಿದೆ. ಆ ಸೌಂದರ್ಯವನ್ನು ನೋಡಿ ನನೆಯಂಬ ಸಂತೋಷಗೊಳ್ಳುತ್ತಾನೆ. ಅಷ್ಟರಲ್ಲಿ ಇದೆಲ್ಲಕ್ಕಿಂತ ಮಿಗಿಲಾದ ಸೌಂದರ್ಯವನ್ನುಳ್ಳ ತರುಣಿಯೊಬ್ಬಳು ಅವನ ಕಣ್ಣಿಗೆ ಬೀಳುತ್ತಾಳೆ.

ಆಕೆಯ ಸೌಂದರ್ಯ ಕಣ್ಣನ್ನು ಕೋರೈಸುತ್ತದೆ. ಈಕೆ ಸಾಮಾನ್ಯ ಹೆಣ್ಣಲ್ಲ, ದೇವಲೋಕದ ಸ್ತ್ರೀ ಇರಬೇಕು. ಎಂದುಕೊಳ್ಳುತ್ತಾನೆ. ಅವಳ ಬಳಿ ಬಂದು ವಿಚಾರಿಸುತ್ತಾನೆ. ಆತನ ಸಂದೇಹ ನಿಜವಾಗುತ್ತದೆ. ಆಕೆ ಸ್ವರ್ಗದಿಂದ ಬಂದ ಅಪ್ಸರೆ ಎಂಬುದು ಗೊತ್ತಾಗುತ್ತದೆ. ತನ್ನ ಈ ವಿಶೇಷವಾದ ಸಂತೋಷಕ್ಕೂ ಈ ಅಪೂರ್ವ ಅನುಭವಕ್ಕೂ ಕಾರಣ ಏನಿರಬಹುದೆಂದು ನನೆಯಂಬ ಅವಳನ್ನು ವಿಚಾರಿಸುತ್ತಾನೆ. ಆಕೆ ಹಿಂದಿನ ಕಥೆಯನ್ನು ಹೇಳತೊಡಗುತ್ತಾಳೆ.

ನಿಜವಾಗಿ ಕಥೆ ಇಲ್ಲಿಂದ ಪ್ರಾರಂಭವಾಗುತ್ತದೆ ಎನ್ನಬೇಕು :

ಕಂಪಿನ ಪೊಳಲು ಎಂಬ ಊರು. ಅದನ್ನಾಳುವವನು ಕರ್ವುವಿಲ್ಲ. ಕರ್ವು ಎಂದರೆ ಕಬ್ಬು. ಕಬ್ಬನ್ನು ಬಿಲ್ಲನ್ನಾಗಿ ಉಳ್ಳವನು ಕರ್ವುವಿಲ್ಲ. ಅಂದರೆ ಮನ್ಮಥ ಅಥವಾ ಕಾಮದೇವ. ಆತನ ಹೆಂಡತಿ ಇಚ್ಛೆಗಾರ್ತಿ, ಅಂದರೆ ರತಿ. ಆಕೆ ಸೌಂದರ್ಯದ ನಿಧಿ. ಚಂದ್ರನ ಸೌಂದರ್ಯವನ್ನೂ ಮೀರಿಸು

ದಂತಹವಳು. ಅವಳ ಮುಖದ ಸೌಂದರ್ಯ ನನಗೆ ಬರಲಿಲ್ಲ ವಲ್ಲಾ ಎಂದು ಚಂದ್ರನ ಮುಖ ಕಪ್ಪಾಯಿತಂತೆ!

ಕಾಮ ಮತ್ತು ರತಿ ಇವರು ಪರಸ್ಪರ ಪ್ರೀತಿಯಿಂದ ಕಾಲ ಕಳೆಯುತ್ತಿರುತ್ತಾರೆ. ಹೀಗಿರುವಾಗ ಒಂದು ದಿನ ಕರ್ವುವಿಲ್ಲ ಒಡ್ಡೋಲಗದಲ್ಲಿ ಕುಳಿತಿದ್ದಾನೆ. ಪಕ್ಕದಲ್ಲಿ ಪ್ರಿಯೆ ಇಚ್ಛೆಗಾರ್ತಿ. ಒಂದು ಕಡೆಯಲ್ಲಿ ವಸಂತ, ಇನ್ನೊಂದು ಕಡೆಯಲ್ಲಿ ಸೊಬಗಿನ ತರುಣಿಯರು. ಹೀಗೆ ಸುಖಾಸೀನನಾಗಿ ಕುಳಿತಿರುವಾಗ ಜೊನ್ನವಕ್ಕಿ ಎಂಬ ದೂತ ಬಂದು ಹೀಗೆ ಹೇಳುತ್ತಾನೆ.

"ಮಹಾಪ್ರಭೂ, ನಿಮಗೆ ವಶವಾಗದವರೇ ಇಲ್ಲ. ಎಲ್ಲರೂ ನಿಮಗೆ ತಲೆಬಾಗಿ ಅಂಜಿ, ಅಳುಕಿ, ನಿಮ್ಮ ಅಪ್ಪಣೆ ಯಂತೆ ನಡೆಯುತ್ತಿದ್ದಾರೆ. ಆದರೆ ಈಗ ಒಬ್ಬ ವಿರೋಧಿ ನಿಮಗೆ ಎದುರಾಳಿಯಾಗಿ ನಿಂತಿದ್ದಾನೆ. ಆತ ಶಿವನೆಂಬ ಬೈರಾಗಿ; ಬೂದಿ ಗೊರವ. ಮುಂಜುವೆಟ್ಟ ಅಂದರೆ ಹಿಮಾ ಲಯವನ್ನು ಮನೆಯನ್ನಾಗಿ ಮಾಡಿಕೊಂಡು ತನ್ನ ಮರುಳು ಪಡೆಯೊಡನೆ, ಗಣಾಧೀಶರೊಡನೆ ಕೂಡಿಕೊಂಡು ನಿಮ್ಮನ್ನು ಲೆಕ್ಕಿಸದೆ ದುರುಳುತನದಿಂದ ವರ್ತಿಸುತ್ತಿದ್ದಾನೆ. ಅಷ್ಟೇ ಅಲ್ಲ ನೆನ್ನೆಯ ದಿನ ಆತ ನಮ್ಮ ಸೈನ್ಯದ ಮೇಲೆ ಬಿದ್ದು ಚಂದ್ರನನ್ನು ಸೆರೆಹಿಡಿದುಕೊಂಡು ಹೋಗಿದ್ದಾನೆ. ಅವನಿಗೆ ತಕ್ಕದನ್ನು ಮಾಡಲು ನೀವು ಸಮರ್ಥರಾಗಿದ್ದೀರಿ" - ಹೀಗೆಂದು ಸೇವಕ ಬಿನ್ನವಿಸಿಕೊಳ್ಳುತ್ತಾನೆ.

ಇದನ್ನು ಕೇಳುತ್ತಿದ್ದಂತೆ ಕರ್ವುವಿಲ್ಲ ಕೋಪದಿಂದ ಸಿಡಿದೇಳುತ್ತಾನೆ. 'ಸೂರ್ಯನನ್ನು ಸಮುದ್ರದಲ್ಲಿ ಮುಳುಗಿಸು ತ್ತೇನೆ; ದಿಗ್ಗಜಗಳ ದಂತಗಳನ್ನು ಮುರಿಯುತ್ತೇನೆ; ಮೇರು ಪರ್ವತವನ್ನು ಕಿತ್ತುಹಾಕುತ್ತೇನೆ: ವಾಸುಕಿಯ

ಜಡೆಯನ್ನು ಮೆಟ್ಟಿ ಸೀಳುತ್ತೇನೆ. ಆಕಾಶದ ನಕ್ಷತ್ರಗಳನ್ನು ತೂರಾಡುತ್ತೇನೆ" – ಎಂದು ಮುಂತಾಗಿ ಕೂಗಾಡುತ್ತಾನೆ.

ಆದರೆ ವಸಂತ ಆತನನ್ನು ಸಮಾಧಾನ ಮಾಡುತ್ತಾನೆ. ಯುದ್ಧಕ್ಕೆ ಮುನ್ನ ಶಿವನ ಬಳಿಗೆ ಒಬ್ಬ ದೂತನನ್ನು ಕಳಿಸಿ ಸಂಧಾನ ನಡೆಸಬಹುದೆಂದೂ ಅದಕ್ಕೊಪ್ಪದಿದ್ದರೆ ಯುದ್ಧವನ್ನು ಕೈಗೊಳ್ಳಬಹುದೆಂದೂ ಸಲಹೆ ನೀಡುತ್ತಾನೆ. ಮನ್ಮಥ ಈ ಸಲಹೆಗೆ ಒಪ್ಪಿ, ತಂಗಾಳಿ ಎಂಬ ದೂತನಿಗೆ ಸಂಧಾನವನ್ನು ವಹಿಸುತ್ತಾನೆ. 'ಶಿವನಲ್ಲಿಗೆ ಹೋಗಿ ಚಂದ್ರನನ್ನು ಬಿಡಿಸಿಕೊಂಡು ಬಾ' - ಎಂದು ಕಳುಹಿಸುತ್ತಾನೆ.

ತಂಗಾಳಿ ಆ ಕೂಡಲೆ ಮಂಜುಬೆಟ್ಟಕ್ಕೆ ಹೊರಡುತ್ತಾನೆ. ಸಮಯವನ್ನು ನೋಡಿ ಶಿವನ ಎದುರಿನಲ್ಲಿ ತನ್ನ ಒಡೆಯ ಕಾಮದೇವನನ್ನು ಹೊಗಳಿ, "ಈಗಲೇ ಚಂದ್ರನನ್ನು ಬಿಟ್ಟುಬಿಡಬೇಕು" ಎಂದು ಹೇಳುತ್ತಾನೆ.

ಈ ಮಾತುಗಳು ಶಿವನನ್ನು ಕೆರಳಿಸುತ್ತವೆ. 'ನಿನ್ನ ಯೋಗ್ಯತೆ ಇದ್ದಷ್ಟು ನೀನು ಹರಟಿದೆ. ನೀನೊಬ್ಬ ಹುಚ್ಚ. ಬರಿಯ ಮಾತುಗಳಿಂದ ಪ್ರಯೋಜನವೇನು? ನಿಮ್ಮ ರಾಜನಿಗೆ ಶಕ್ತಿ ಇರುವುದಾದರೆ ಕಾಳಗದಲ್ಲಿ ತೋರಿಸಲಿ' - ಎಂದು ಶಿವ ಮನ್ಮಥನನ್ನು ಜರಿದು ನುಡಿಯುತ್ತಾನೆ. ತಂಗಾಳಿಯ ಮಾತುಗಳನ್ನು ತಿರಸ್ಕರಿಸುತ್ತಾನೆ.

ತಂಗಾಳಿಯ ಸಂಧಾನ ಮುರಿದು ಬೀಳುತ್ತದೆ. 'ನನ್ನ ಒಡೆಯ ಕಾಮದೇವನ ಪರಾಕ್ರಮದ ರುಚಿ ನಿಮಗಿನ್ನೂ ತಿಳಿದಿಲ್ಲ. ಈಗ ಕಾಲ ಒದಗಿದೆ; ಆತನೇ ಅದನ್ನು ತಿಳಿಸುತ್ತಾನೆ' - ಎಂದು ಹೇಳಿ ತಂಗಾಳಿ ಅಲ್ಲಿಂದ ನೇರವಾಗಿ ತನ್ನ ಒಡೆಯನ ಬಳಿಗೆ ಬರುತ್ತಾನೆ. ಶಿವನ ಆಸ್ಥಾನದಲ್ಲಿ ನಡೆದುದೆಲ್ಲವನ್ನೂ ತಿಳಿಸುತ್ತಾನೆ.




ಆಗ ಕರ್ವುರವಿಲ್ಲನ ಕೋಪಕ್ಕೆ ಮೇರೆಯಿಲ್ಲವಾಗುತ್ತದೆ. ಅಕ್ಕಪಕ್ಕದಲ್ಲಿದ್ದ ತನ್ನ ಪರಿಜನರನ್ನು ನೋಡುತ್ತಾ ಆರ್ಭಟಿಸುತ್ತಾನೆ. "ಈ ಗೊರವನಿಗೆ ನನ್ನನ್ನು ಕಾಡುವ ದುರ್ಬುದ್ಧಿ ಬಂದಿದೆ. ಈಗ ಅವನ ಪರಾಕ್ರಮದ ಜ್ವಾಲೆಯನ್ನು ನಂದಿಸಿ ಅವನ ಬಿಂಕವನ್ನು ತಗ್ಗಿಸುತ್ತೇನೆ. ನನ್ನ




ಬಾಣಗಳಿಂದ ಸೆದೆಬಡಿದು ಅವನನ್ನು ಅರೆಹೆಣ್ಣು ಮಾಡುತ್ತೇನೆ; ಅವನ ಅಹಂಕಾರದ ಹುಟ್ಟಡಗಿಸುತ್ತೇನೆ" ಎಂದು ಪ್ರತಿಜ್ಞೆ ಮಾಡಿ ಯುದ್ಧಕ್ಕೆ ಸಿದ್ಧನಾಗುತ್ತಾನೆ.

ಕಾಮನ ಸೈನ್ಯದ ವರ್ಣನೆ ಸೊಗಸಾಗಿ ಬಂದಿದೆ. ಎಳೆ ಮಾವಿನ ತೇರನ್ನೇರಿ ಹೊರಟಿದ್ದಾನೆ ಮನ್ಮಥ. ಗಿಳಿಗಳೇ ಆ ರಥವನ್ನೆಳೆಯುವ ಕುದುರೆಗಳು, ತಂಗಾಳಿಯೇ ಸೂತ; ಹೊಸ ಚಿಗುರುಗಳೇ ರಥದ ಮೇಲಿನ ಬಾವುಟ. ಹಂಸ.



ಕೋಗಿಲೆ, ಚಕ್ರವಾಕ, ದುಂಬಿ ಮೊದಲಾದುವುಗಳಿಂದ ಕೂಡಿದ ಸೈನ್ಯ ಮುಂದೆ ಮುಂದೆ ಸಾಗುತ್ತಿದೆ.

ಇಲ್ಲಿ ಆಂಡಯ್ಯ ಒಂದು ಸನ್ನಿವೇಶವನ್ನು ಚಿತ್ರಿಸಿದ್ದಾನೆ.



ಅದು ಆತನ ಧಾರ್ಮಿಕ ಶ್ರದ್ಧೆಯನ್ನು ಎತ್ತಿ ತೋರಿಸುತ್ತದೆ. ಈತನ ಸೈನ್ಯ ಹೀಗೆ ಹೋಗುತ್ತಿರುವಾಗ ಎದುರಿನಲ್ಲಿ ಧ್ಯಾನಾಸಕ್ತನಾಗಿ ನಿಂತ ಜೈನ ಸಂನ್ಯಾಸಿಯೊಬ್ಬನನ್ನು ಕಾಮ ನೋಡುತ್ತಾನೆ.

ಆ ಸವಣನ ಪ್ರಭಾವದಿಂದ ಆ ಕಾಡಿನ ಬೇಡರೂ ಬೇಟೆಯಾಡುವುದನ್ನು ಬಿಟ್ಟು ಅಹಿಂಸಾವ್ರತದಲ್ಲಿ ನಿರತರಾಗಿದ್ದಾರೆ. ಕೊಲ್ಲದಿರುವುದೇ ನಿಜವಾದ ಧರ್ಮ ಎಂಬುದನ್ನು ಕಂಡುಕೊಂಡಿದ್ದಾರೆ. ಪ್ರಾಣಿಗಳೂ ತಮ್ಮ ಜಾತಿ ವೈರವನ್ನು ಬಿಟ್ಟಿವೆ. ಹಾವು ಮುಂಗುಸಿಗಳು, ಜಿಂಕೆ ಹುಲಿಗಳು, ಸಿಂಹ ಆನೆಗಳು ಒಟ್ಟಿಗೆ ಆಟವಾಡುತ್ತಿವೆ. ಅಂತಹ ತಪಸ್ಸಿನ ಪ್ರಭಾವವನ್ನು ಜೈನ ಸಂನ್ಯಾಸಿ ಸುತ್ತಲೂ ಬೀರಿದ್ದಾನೆ.

ಆದರೆ ಮನ್ಮಥನಿಗೆ ಅವನನ್ನು ಕಂಡೊಡನೆ ಸಿಟ್ಟು ಬರುತ್ತದೆ. 'ನನ್ನ ಎದುರಿನಲ್ಲಿ ಹೀಗೆ ನಿಲ್ಲಬಲ್ಲ ಸಂನ್ಯಾಸಿಯನ್ನು ನಾನು ಇದುವರೆಗೂ ಕಂಡಿಲ್ಲ' ಎಂದು ಆತನ ಮೇಲೆ ಕೋಪಿಸಿಕೊಳ್ಳುತ್ತಾನೆ. ಆದರೆ ಆತನ ಜೊತೆಯಲ್ಲಿದ್ದ ಗೆಳೆಯ ಆತನಿಗೆ ಬುದ್ಧಿಯ ಮಾತುಗಳನ್ನು ಹೇಳುತ್ತಾನೆ. 'ಅರಿಷಡ್ವರ್ಗಗಳನ್ನು ಗೆದ್ದ ಈ ಸವಣನ ಮೇಲೆ ಕೈಮಾಡುವುದು ಯುಕ್ತವಲ್ಲ. ಇದೇ ಪರಾಕ್ರಮವನ್ನು ಶಿವನ ಮೇಲೆ ತೋರಿಸು' ಎಂದು ಪ್ರೇರೇಪಿಸುತ್ತಾನೆ.

ಆಗ ಮನ್ಮಥನಿಗೆ ಜ್ಞಾನೋದಯವಾಗುತ್ತದೆ. 'ಒಂದು ವೇಳೆ ಈತನ ಮೇಲೆ ನಾನು ಬಾಣವನ್ನು ಬಿಟ್ಟಿದ್ದರೆ ನನ್ನ ಹೂ ಬಾಣಗಳೆಲ್ಲಾ ಸುಟ್ಟು ಹೋಗುತ್ತಿದ್ದುವು; ಬಿಲ್ಲು ಮುರಿದು ಹೋಗುತ್ತಿತ್ತು; ಅಲ್ಲದೆ ನನ್ನ ಸೈನ್ಯವೆಲ್ಲವೂ ನಾಶವಾಗುತ್ತಿತ್ತು' ಎಂದುಕೊಳ್ಳುತ್ತಾ ಜೈನ ತಪಸ್ವಿಗೆ ತಲೆಬಾಗಿ ಮುಂದೆ ನಡೆಯುತ್ತಾನೆ. ಆಂಡಯ್ಯನ ಜೈನ ಧರ್ಮಶ್ರದ್ಧೆಗೆ ಇದು ಒಳ್ಳೆಯ ಉದಾಹರಣೆಯಾಗಿದೆ.

ಮನ್ಮಥನ ಸೈನ್ಯ ಮುಂದುವರಿದು ಮಂಜು ಬೆಟ್ಟಕ್ಕೆ ಸಮೀಪದಲ್ಲಿದ್ದ ರನ್ನಗಲ್ಲಿನ ಬೆಟ್ಟಕ್ಕೆ ಬಂದು ಅಲ್ಲಿ ಬೀಡು ಬಿಡುತ್ತದೆ. ಇದು ಶಿವನಿಗೆ ತಿಳಿಯುತ್ತದೆ. ಆತ ವೀರಭದ್ರ


ನನ್ನು ಕರೆದು ಕಾಮನನ್ನು ಎದುರಿಸುವಂತೆ ಆಜ್ಞೆ ಮಾಡಿ ಕಳಿಸುತ್ತಾನೆ. ಶಿವನ ಕಡೆಯ ವೀರರೆಲ್ಲಾ ತಮ್ಮ ಪ್ರತಾಪ ವನ್ನು ಕೊಚ್ಚಿಕೊಳ್ಳುತ್ತಾ ವೀರಭದ್ರನ ನೇತೃತ್ವದಲ್ಲಿ ಕಾಮನ ಸೈನ್ಯವನ್ನು ಎದುರಿಸುತ್ತಾರೆ. ಶಿವ ಕಾಮ ಇವರ ಸೈನ್ಯಗಳ ಘರ್ಷಣೆ ಭಯಂಕರವಾಗುತ್ತದೆ. ಕೊನೆಗೆ ಯುದ್ಧದಲ್ಲಿ ವೀರಭದ್ರ ಸೋಲುತ್ತಾನೆ. ಆಗ ಕಾಮನ ಸೈನ್ಯ ಅತಿ ವೇಗವಾಗಿ ಮುಂದುವರಿದು ಮಂಜುಬೆಟ್ಟವನ್ನೇ ಮುತ್ತುತ್ತದೆ.

ಈಗ ಶಿವ ಮತ್ತು ಮನ್ಮಥರ ನೇರವಾದ ಯುದ್ಧ. ಇದನ್ನು ನೋಡಲು ದೇವತೆಗಳೆಲ್ಲಾ ಆಕಾಶದಲ್ಲಿ ಸೇರಿದ್ದಾರೆ. ಇಂದ್ರ ವಿಷ್ಣು ಬ್ರಹ್ಮ ಎಲ್ಲರೂ ಬಂದಿದ್ದಾರೆ. ಸಾಕ್ಷಾತ್ ಶಿವನಿಗೂ ಕಾಮನ ಪ್ರತಾಪವನ್ನು ಕಾಣುವ ತವಕ.

ಯುದ್ಧ ಪ್ರಾರಂಭವಾಗುತ್ತದೆ. ಶಿವನ ಸೈನ್ಯ ಕಾಮನ ಸೈನ್ಯವನ್ನು ಎದುರಿಸಲಾರದೆ ಸೋತು ಚೆಲ್ಲಾಪಿಲ್ಲಿಯಾಗು ತ್ತದೆ.ಶಿವನೊಬ್ಬನೇ ನಿಂತು ಮನ್ಮಥನನ್ನು ಎದುರಿಸುತ್ತಾನೆ. ಆಗ ಕಾಮ ಶಿವನನ್ನು ಮೂದಲಿಸುತ್ತಾನೆ ;

"ನನ್ನ ಬಾಣಗಳು ನಿನ್ನನ್ನು ನಾಟುವಾಗ ನಿನ್ನ ಜಡೆ, ನಿನ್ನ ಚರ್ಮದ ಉಡುಗೆ, ನಿನ್ನ ಸರ್ಪಾಭರಣ ಮತ್ತು ಯೋಗ ದಂಡಗಳು ನಿನ್ನನ್ನು ರಕ್ಷಿಸುತ್ತವೆಯೋ ? ಈಗಲಾದರೂ ಚಂದ್ರನನ್ನು ಬಿಟ್ಟು ನಿನ್ನ ತಲೆಯನ್ನು ಕಾಪಾಡಿಕೋ" ಎನ್ನುತ್ತಾ ಹೂ ಬಾಣಗಳನ್ನು ಪ್ರಯೋಗಿಸುತ್ತಾನೆ.

ಮನ್ಮಥನ ಆ ಸನೆಗಣೆಗಳು ಶಿವನ ಕೋಪಜ್ವಾಲೆ ಯನ್ನು ತಣ್ಣಗೆ ಮಾಡುತ್ತವೆ. ಮತ್ತು ನಾಲ್ಕು ದಿಕ್ಕು ಗಳನ್ನೂ ವ್ಯಾಪಿಸುತ್ತವೆ. ಬೆಟ್ಟ, ಹೊಲ, ಬಾನು, ನದಿಗಳ ನ್ನೆಲ್ಲಾ ಹೂವಿನಿಂದ ಮುಚ್ಚಿದಂತಾಗುತ್ತದೆ. ಅದಕ್ಕೆ ಸಿಕ್ಕ




ವರೆಲ್ಲಾ ತಳಮಳಗೊಳ್ಳುತ್ತಾರೆ, ವೀರರು ಓಡುತ್ತಾರೆ; ಎಲ್ಲೆಲ್ಲಿಯೂ ಹಾಹಾಕಾರವಾಗುತ್ತದೆ.

ಶಿವನ ಹಣೆಯಲ್ಲಿ ಕೆನ್ನೆಯಲ್ಲಿ ಕೈಗಳಲ್ಲಿ ತೊಡೆ ತೋಳು ಗಳಲ್ಲಿ ಕಾಮಬಾಣಗಳು ನಾಟಿಕೊಳ್ಳುತ್ತವೆ. ಆಗ ಶಿವನು




ಅರಿವೆಣ್ಣಾಗಿ ಪರಿಣಮಿಸುತ್ತಾನೆ. ಅಂದರೆ ಅವನ ದೇಹದ ಅರ್ಧಭಾಗ ಹೆಣ್ಣಾಗುತ್ತದೆ. ಮನ್ಮಥನ ಪ್ರತಿಜ್ಞೆ ಈಡೇರುತ್ತದೆ. ಅಪ್ಸರ ಸ್ತ್ರೀಯರು ಕಾಮನ ಮೇಲೆ ಹೂವಿನ ಮಳೆಗರೆಯುತ್ತಾರೆ.

ಆಗ ಶಿವ ಯುದ್ಧವನ್ನು ನಿಲ್ಲಿಸಿ ಮನ್ಮಥನನ್ನೇ ತಬ್ಬ



ಗಃಟಕ್ಕಿ ನೋಡುತ್ತಾ ಭಯಂಕರಾಕಾರವನ್ನು ತಾಳುತ್ತಾನೆ. ಶಾಪವನ್ನು ಕೊಡಲು ಉದ್ದೇಶಿಸಿರುವಂತೆ ಅವನ ತುಟಿಗಳು ನಡುಗುತ್ತವೆ. ಅವನ ಈ ರೌದ್ರಾವೇಶವನ್ನು ಕಂಡು ಕಾಮನ ಸೈನ್ಯ ನಡುಗುತ್ತದೆ. ಅಷ್ಟರಲ್ಲಿ ಶಿವ ಮನ್ಮಥನನ್ನು ಹೀಗೆ ಶಪಿಸುತ್ತಾನೆ.



ನೀನು ಅಹಂಕಾರದಿಂದ ಬಂದು ನನ್ನನ್ನು ಎದುರಿಸಿದ್ದೀಯೆ. ಹಿರಿಯರೆನ್ನುವ ಮರ್ಯಾದೆಯನ್ನೂ ನೀನು ಲೆಕ್ಕಿಸಲಿಲ್ಲ. ಈ ನಿನ್ನ ಸೊಕ್ಕಿನ ಫಲವಾಗಿ ನೀನು ನಿನ್ನ ಪ್ರಿಯೆಯನ್ನಗಲಿ ಯಾರೂ ಅರಿಯದಂತೆ ಎಲ್ಲಿಯಾದರೂ ಅಡಗಿಕೊಂಡಿರುವಂತಾಗಲಿ ಎಂದು ಶಾಪವನ್ನು ಕೊಡುತ್ತಾನೆ.

ಇದನ್ನು ಕೇಳಿದೊಡನೆ ಇಚ್ಛೆಗಾರ್ತಿ ಮೂರ್ಛೆ ಹೋಗುತ್ತಾಳೆ. ತನ್ನ ಪತಿಯಾದ ಕಾಮನ ಅಗಲುವಿಕೆಯ ದುಃಖದಿಂದ ಅವಳ ಸ್ಥಿತಿ ಚಿಂತಾಜನಕವಾಗುತ್ತದೆ. ಅವಳ ದುಃಖದ ಬೇಗೆಗೆ ಮುತ್ತುಗಳು ಪುಡಿಪುಡಿಯಾಗುತ್ತವೆ: ಶ್ರೀಗಂಧ ಕಸ್ತೂರಿಯಂತೆ ಕಪ್ಪಾಗುತ್ತದೆ. ಮಾವಿನಮರ ಸೀದು ಕರಿಕಾಗುತ್ತದೆ. ತಾವರೆಯ ಕೊಳ ಕಾಯ್ದು ಕುದಿಯುತ್ತದೆ. ತನ್ನ ಈ ಬೇಗೆಯನ್ನು ಆರಿಸಿಕೊಳ್ಳಲು ನಾನಾ ರೀತಿಯಲ್ಲಿ ಪ್ರಯತ್ನಿಸುತ್ತಾಳೆ. ತನ್ನ ಪ್ರಿಯ ಎಲ್ಲಿ ಅಡಗಿದ್ದಾನೆಂಬುದನ್ನು ತಿಳಿಯದೆ ಹಲುಬುತ್ತಿದ್ದಾಳೆ.

ಅಂದು ಶಿವನಿಂದ ಶಾಪಹತನಾಗಿ ಬಂದ ಮನ್ಮಥನೇ ನನೆಯಂಬನೆಂಬ ರಾಜನಾಗಿದ್ದಾನೆ. ನೀವು ಜ್ಞಾಪಿಸಿಕೊಳ್ಳಬೇಕು ಕಥೆ ಪ್ರಾರಂಭವಾಗುವುದು ನನೆಯಂಬ ಎಂಬ ರಾಜನಿಂದ. ಆತನಿಗೆ ಅಪ್ಸರೆಯೊಬ್ಬಳು ಹಿಂದಿನ ಈ ಕಥೆಯನ್ನೆಲ್ಲಾ ಹೇಳುತ್ತಾಳೆ ಮತ್ತು ಕೊನೆಯಲ್ಲಿ:

"ಈಶ್ವರ ಶಾಪದಿಂದ ನೀನೇ ನನೆಯಂಬನಾಗಿ ಇಲ್ಲಿ ಅಡಗಿದ್ದೀಯ. ನನ್ನ ಈ ಮಾತುಗಳನ್ನು ಕೇಳುತ್ತಿದ್ದಾಗಲೇ ನಿನ್ನ ಶಾಪ ಹರಿಯಿತು. ಇನ್ನು ನೀನು ಮೊದಲಿನ ರೂಪವನ್ನು ಪಡೆದು ನಿನ್ನ ಪ್ರಿಯೆಯ ಬಳಿಗೆ ಹೋಗು" ಎಂದು ಹೇಳಿ ಅಪ್ಸರೆ ಅದೃಶ್ಯಳಾಗುತ್ತಾಳೆ.

ಅಪ್ಸರ ಸ್ತ್ರೀ ಹೇಳಿದ ಈ ಕಥೆಯನ್ನು ನನೆಯಂಬನ ಬಳಿಯಿದ್ದ ಗಿಳಿಯೊಂದು ಕೇಳಿಕೊಳ್ಳುತ್ತದೆ. ಆ ಕೂಡಲೇ ಅದು ಹಾರಿಹೋಗಿ ಕಾಮನ ಗೆಳೆಯ ವಸಂತನಿಗೆ ಸುದ್ದಿ ತಿಳಿಸುತ್ತದೆ. ಶಿವನಿಂದ ಶಾಪಕ್ಕೆ ಗುರಿಯಾಗಿ ಮನ್ಮಥ ಎಲ್ಲಿ ಅಡಗಿದ್ದಾನೆಂಬುದನ್ನು ತಿಳಿಯದೆ ದುಃಖಿಸುತ್ತಿದ್ದ ವಸಂತನಿಗೆ ಇದು ತಿಳಿದೊಡನೆ ಸಂತೋಷವಾಗುತ್ತದೆ. ಮನ್ಮಥ

ನನೆಯುಂಬನಾಗಿರುವ ಈ ಸುದ್ದಿಯನ್ನು ಆತ ಇಚ್ಛೆಗಾರ್ತಿಗೆ ತಿಳಿಸುತ್ತಾನೆ.

ಆಕೆಯ ಸಂತೋಷ ಉಕ್ಕಿ ಹರಿಯುತ್ತದೆ. ಬಿಸಿಲಲ್ಲಿ ಬಳಲಿದವನು ತಂಪುಕೊಳವನ್ನು ಹೊಕ್ಕಂತೆ, ಬಡವ ಚಿನ್ನವನ್ನು ಎಡಪಿ ಕಂಡಂತೆ ರತಿ ಆನಂದ ಗೊಳ್ಳುತ್ತಾಳೆ.

ಈ ವೇಳೆಗೆ ನನೆಯುಂಬನಾಗಿದ್ದ ಮನ್ಮಥ ತನ್ನ ನಿಜ ರೂಪದಿಂದ ಊರಿಗೆ ಬರುತ್ತಿರುವುದನ್ನು ತಿಳಿದು ಆತನನ್ನು ಸ್ವಾಗತಿಸುವುದಕ್ಕಾಗಿ ಎಲ್ಲರೂ ಸಿದ್ಧರಾಗುತ್ತಾರೆ. ಪಟ್ಟಣವನ್ನು ಸಿಂಗರಿಸುವಂತೆ ಎಲ್ಲೆಲ್ಲಿಯೂ ಡಂಗುರ ಹೊಡೆಸುತ್ತಾರೆ.

ಇಚ್ಛೆಗಾರ್ತಿ ತನ್ನ ಪರಿವಾರದೊಡನೆ ಬಂದು ಸಂಭ್ರಮದಿಂದ ಕರ್ಪುರವಿಲ್ಲನನ್ನು ಎದುರುಗೊಳ್ಳುತ್ತಾಳೆ. ರತಿ ಮನ್ಮಥರಿಗೆ ಮಾವೆಂಬ ಆನೆಯ ಮೇಲೆ ಕಂಪುವ್ರೊಳಲಿನಲ್ಲಿ ಮೆರವಣಿಗೆ ನಡೆಯುತ್ತದೆ. ಜನರೆಲ್ಲಾ ತಮ್ಮ ರಾಜ ರಾಣಿಯರ ವೈಭವದ ಈ ಮೆರವಣಿಗೆಯನ್ನು ನೋಡಿ ಸಂತೋಷದಿಂದ ನಲಿಯುತ್ತಾರೆ. ಹೀಗೆ ಆಂಡಯ್ಯ ತನ್ನ ಕಥೆಯನ್ನು ಮುಗಿಸುತ್ತಾನೆ" ಎಂದು ಉಪಾಧ್ಯಾಯರು ಕಥೆಯನ್ನು ಮುಗಿಸಿದರು. ಒಂದೇ ಮನಸ್ಸಿನಿಂದ ಕಥೆ ಕೇಳುತ್ತಿದ್ದ ವಿದ್ಯಾರ್ಥಿಗಳೂ ಸ್ವಲ್ಪ ಮೌನವಾಗಿದ್ದರು. ಅನಂತರ ಒಬ್ಬ ವಿದ್ಯಾರ್ಥಿ ಹೇಳಿದ ;

"ಕಥೆ ತುಂಬಾ ಚೆನ್ನಾಗಿದೆ ಸಾರ್."

"ಅದು ಸರಿ ಸಾರ್....ಆದರೆ ನಮ್ಮ ಪುರಾಣದ ಕಥೆಯನ್ನು ಆಂಡಯ್ಯ ಹೀಗೇಕೆ ಬದಲಾಯಿಸಿಕೊಂಡ. ಶಿವನಿಗಿಂತ ಕಾಮನೇ ದೊಡ್ಡವನು ಎನ್ನುವ ಹಾಗೆ ಹೇಳಿದ್ದಾನಲ್ಲ" ಎಂದು ಇನ್ನೊಬ್ಬ ತನ್ನ ಅನುಮಾನವನ್ನು ವ್ಯಕ್ತಪಡಿಸಿದ.



"ನಿಜ....ನನಗೇನೋ ನಮ್ಮ ಪುರಾಣದ ಕಥೆಯೇ ಚೆನ್ನಾಗಿದೆ ಅನಿಸುತ್ತೆ" ಇನ್ನೊಬ್ಬ ಹುಡುಗನ ಪ್ರತಿಕ್ರಿಯೆ.

"ಒಂದು ರೀತಿಯಲ್ಲಿ ನೋಡಿದಾಗ ನಿಮಗೆ ಹಾಗೆನ್ನಿಸುವುದು ಸಹಜ. ಆ ಕಥೆ ಪರಿಚಿತವಾಗಿರುವ ನಮಗೆ ಈ ಕಥೆ ವಿಚಿತ್ರವಾಗಿ ಕಾಣುತ್ತದೆ. ಇದಕ್ಕೆ ರಾಜಕೀಯದ ಹಿನ್ನೆಲೆ ಇರುವಂತೆಯೇ ಜೈನ ಪರಂಪರೆಯ ಪೋಷಣೆಯೂ ಇದೆ ಯೆಂಬುದನ್ನು ಮರೆಯಬಾರದು. ಜೈನ ಪುರಾಣ ಪರಂಪರೆ ಯಲ್ಲಿ ಕಾಮದೇವನಿಗೆ ವಿಶಿಷ್ಟವಾದ ಸ್ಥಾನವಿದೆ. ಆ ಪುರಾಣ ಗಳ ಪ್ರಕಾರ ಇಪ್ಪತ್ತನಾಲ್ಕು ಜನ ಕಾಮದೇವರಿದ್ದಾರೆ. ಆದಿ ಪುರಾಣದಲ್ಲಿ ಬರುವ ಬಾಹುಬಲಿ ಒಬ್ಬ ಕಾಮದೇವ. ಅವನೇ ಶ್ರವಣಬೆಳಗೊಳದಲ್ಲಿರುವ ಗೊಮ್ಮಟೇಶ್ವರ.ಮನ್ಮಥ ಎಂಬುದೇ ಗೊಮ್ಮಟ ಆಗಿದೆ ಎಂಬ ಅಭಿಪ್ರಾಯವೂ ಒಂದುಂಟು. ಇಲ್ಲಿ ಕಾಮದೇವ ತೇಜೋವಂತನಾಗಿ ಶಕ್ತಿ ಸಂಪನ್ನತೆಯಿಂದ ಕೂಡಿದವನಾಗಿದ್ದಾನೆ. ಬಹುಶಃ ಈ ಎಲ್ಲವೂ ಆಂಡಯ್ಯನಿಗೆ ಕಾಮದೇವನ ಮಹತ್ವವನ್ನು ಎತ್ತಿ ಹಿಡಿಯುವುದಕ್ಕೆ ಪ್ರೇರಕವಾಗಿರಬಹುದು.

ಅಲ್ಲದೆ ಇನ್ನೊಂದು ಅಂಶವನ್ನೂ ನೀವು ಗಮನಿಸಬೇಕು. ಶಿವನನ್ನು ಆತ ತಿರಸ್ಕರಿಸಿಲ್ಲ. ಕೊನೆಯಲ್ಲಿ ಆತನ ಶಕ್ತಿಯನ್ನು ಎತ್ತಿ ಹಿಡಿದಿದ್ದಾನೆ. ಕಾಮನಿಗೆ ಶಾಪವನ್ನು ಕೊಟ್ಟು ಆತ ನನ್ನು ಅಡಗಿಸುವ ಶಕ್ತಿಯನ್ನು ಆತ ಪಡೆದಿದ್ದಾನೆ.

ಶಿವ ಅರ್ಧನಾರೀಶ್ವರ ಎಂಬುದು ವೈದಿಕ ಸಾಹಿತ್ಯದಲ್ಲಿ ಬಹಳ ಅರ್ಥವತ್ತಾದ ಕಲ್ಪನೆ. ಅದನ್ನು ಚಮತ್ಕಾರವಾದ ರೀತಿಯಲ್ಲಿ ಆಂಡಯ್ಯ ಈ ಕಥೆಯಲ್ಲಿ ಅಳವಡಿಸಿಕೊಂಡಿ ದ್ದಾನೆ. ಕಾಮನ ಹೂಬಾಣಗಳು ಶಿವನ ಅಂಗಾಂಗಗಳಲ್ಲಿ ನಾಟಿ ಆತನನ್ನು ಅರೆವೆಣ್ಣನನ್ನಾಗಿ ಮಾಡಿದುವು ಎಂಬುದು

ಕುತೂಹಲಕರವಾಗಿದೆ. ಕೇವಲ ಕಥೆಯ ಚಮತ್ಕಾರದ ಮಟ್ಟದಲ್ಲಿ ಅದನ್ನು ನಾವು ಆಸ್ವಾದಿಸಬಹುದು.

ಕೊನೆಯಲ್ಲಿ ಒಂದು ಮಾತನ್ನು ಹೇಳಬಹುದೆಂದು ತೋರುತ್ತದೆ. ಇದು ಕಾಮನ ಗೆಲವು ನಿಜ. ಆದರೆ ಶಿವನ ಸಂಪೂರ್ಣ ಸೋಲಲ್ಲ. ಒಂದು ಹಂತದಲ್ಲಿ ಶಿವನ ಗೆಲವೂ ಹೌದು. ಅಲ್ಲದೆ ಇನ್ನೊಂದು ಪಾತ್ರವನ್ನು ಮರೆಯುವಂತಿಲ್ಲ. ಅದು ಜೈನ ಸಂನ್ಯಾಸಿಯ ಪಾತ್ರ. ಆತನ ವಿರಕ್ತಿ ಕಾವ್ಯದ ಕೇಂದ್ರ ಬಿಂದು. ಅದರ ಒಂದು ಕಥೆಯಲ್ಲಿ ಕಾಮನ ಕಾವ್ಯತತ್ತ್ವ; ಇನ್ನೊಂದು ಕಡೆಯಲ್ಲಿ ಶಿವನ ಸೃಷ್ಟಿ ತತ್ತ್ವಗಳು ನಿಂತು ಅದನ್ನು ಪೂರ್ಣಗೊಳಿಸುತ್ತವೆ. ಬಹುಶಃ ಇದು ಕಥೆಯ ಹಿಂದಿರುವ ಕಾವ್ಯದರ್ಶನ ಎನ್ನಬಹುದು.

ಕನ್ನಡಮನಿಪ್ಪಾನಾಡು ಚೆಲ್ವಾಯ್ತು

ಆಂಡಯ್ಯ ಒಳ್ಳೆಯ ಕಥೆಗಾರನಾಗಿರುವಂತೆ ಚಿತ್ರಕಾರನೂ ಹೌದು. ಅಂದರೆ ಚಿತ್ರಗಾರ ಬಣ್ಣಗಳಿಂದ ಚಿತ್ರವನ್ನು ಬರೆಯುವಂತೆ ಈತ ಶಬ್ದಗಳಿಂದ ಚಿತ್ರವನ್ನು ನಿರ್ಮಿಸುತ್ತಾನೆ. ವರ್ಣನೆಗಳಿಂದ ಸನ್ನಿವೇಶವನ್ನು ನಮ್ಮ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಶಬ್ದ ಚಿತ್ರಗಳ ಮೂಲಕ ವರ್ಣನೆಗಳ ಮೂಲಕ, ಅನುಭವವನ್ನು ಓದುಗರಿಗೆ ತಂದು ಕೊಡುವಂತೆ ಮಾಡುವುದರಲ್ಲಿ ಆಂಡಯ್ಯ ಜಾಣ್ಮೆಯನ್ನು ತೋರಿಸಿದ್ದಾನೆ.

ಅದರಲ್ಲಿಯೂ ಕನ್ನಡ ನಾಡನ್ನು ಆತ ವರ್ಣಿಸಿರುವ

ರೀತಿ ಮನವುಟ್ಟುವಂತಿದೆ. ಆಂಡಯ್ಯನಿಗೆ ಕನ್ನಡ ನಾಡು ಮತ್ತು ನುಡಿಗಳ ಮೇಲಿನ ಪ್ರೇಮ ಅಸಾಧಾರಣವಾದದ್ದು. ಕನ್ನಡ ಭಾಷೆಯ ಮೇಲಿನ ಪ್ರೇಮದಿಂದ ವೀರನಿಷ್ಠೆಯನ್ನು ಕೈಗೊಂಡು ಒಂದೂ ಸಂಸ್ಕೃತ ಶಬ್ದವನ್ನು ಬಳಸದಂತೆ ಕಾವ್ಯವನ್ನು ಬರೆದ ಹಿರಿಮೆ ಆತನದು. ಅಂತೆಯೇ ಕನ್ನಡ ನಾಡಿನ ವರ್ಣನೆಯಲ್ಲಿಯೂ ಆತನ ಅಭಿಮಾನ ಹೊನಲಾಗಿ ಹರಿದಿದೆ. ಅದನ್ನು ನೋಡುವುದಕ್ಕೆ ಮೊದಲು ಆತನ ಭಾಷೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ.

ಆಂಡಯ್ಯನ ಅಚ್ಚಕನ್ನಡ ಭಾಷೆ, ಸಹಜ ಸುಂದರವಾದದ್ದು. ಉದ್ಬುದ್ಧವಾದ ಸಂಸ್ಕೃತ ಶಬ್ದಗಳಿಂದ ಕೂಡಿದ್ದ ಭಾಷೆಯನ್ನು ಆ ಬಂಧನದಿಂದ ಬಿಡುಗಡೆಗೊಳಿಸಿದವನು ಈತ. ಆ ಉತ್ಸಾಹದಲ್ಲಿ ಇನ್ನೊಂದು ಕೊನೆಗೆ ಆತ ಹೋದ.

ಈಗ ನಮ್ಮ ದಿನಬಳಕೆಯ ಭಾಷೆಯಲ್ಲಿಯೂ ಎಷ್ಟೋ ಸಂಸ್ಕೃತ ಶಬ್ದಗಳು ಸಹಜವಾಗಿಯೇ ಸೇರಿಕೊಂಡು ಹೋಗಿವೆ. ಬೆಳೆಯುವ ಭಾಷೆಗೆ ಅದು ಅನಿವಾರ್ಯವೂ ಹೌದು. ಈಗ ನಾವು ಇಂಗ್ಲಿಷ್ ಶಬ್ದಗಳನ್ನು ಸೇರಿಸಿಕೊಳ್ಳುತ್ತಿಲ್ಲವೆ. ಕೋರ್ಟ್, ರೈಲು, ಬಸ್ಸು, ಇತ್ಯಾದಿ ಮಾತುಗಳು ಇಂಗ್ಲಿಷೆಂದೇ ತಿಳಿದಿರುವಷ್ಟು ಕನ್ನಡವಾಗಿ ಹೋಗಿವೆ. ಆದರೆ ಇದು ಅತಿಯಾದಾಗ ಅನಾವಶ್ಯಕವಾಗಿ ಅಂತಹ ಶಬ್ದಗಳನ್ನು ತುರುಕಿದಾಗ ಭಾಷೆ ಕೆಡುತ್ತದೆ. ಹಾಗೆಯೇ ಹಿಂದಿನಿಂದಲೂ ಸಂಸ್ಕೃತದ ಅನೇಕ ಶಬ್ದಗಳು ಕನ್ನಡದಲ್ಲಿ ಬೆರೆತುಹೋಗಿವೆ. ಅವು ಅತಿಯಾದಾಗ ಕನ್ನಡಕ್ಕೆ ಹೊರೆಯಾಗುತ್ತವೆ. ಕನ್ನಡದ ಸಹಜ ಸೌಂದರ್ಯ ಕುಗ್ಗುತ್ತದೆ.

ಅಂತಹ ಒಂದು ಸ್ಥಿತಿಯಲ್ಲಿ ಆಂಡಯ್ಯ ಮುಂದೆ ಬಂದವನು. ಒಂದೂ ಸಂಸ್ಕೃತ ಶಬ್ದವನ್ನು ಬಳಸಬಾರದೆನ್ನುವ ವೀರನಿಷ್ಠೆಯನ್ನು ಕೈಗೊಂಡು ಕಾವ್ಯವನ್ನು ಬರೆದವನು.

ಆದರೆ ಸಂಸ್ಕೃತ ಶಬ್ದಗಳಿಗೆ ಬದಲಾಗಿ ತದ್ಭವಗಳನ್ನು ಧಾರಾಳವಾಗಿ ಬಳಸುತ್ತಾನೆ. ತದ್ಭವಗಳೆಂದರೆ ನಿಮಗೆ ಗೊತ್ತುತಾನೇ? ಅವು ಸಂಸ್ಕೃತದಿಂದಲೇ ಬಂದುವು. ಆದರೆ ಕನ್ನಡದ ಜಾಯಮಾನಕ್ಕೆ ಅನುಗುಣವಾಗಿ ಬದಲಾವಣೆಯನ್ನು ಪಡೆದಿರುತ್ತವೆ. ಉದಾಹರಣೆಗೆ ಸಂತೋಷ ಎನ್ನುವುದು ಸಂಸ್ಕೃತ ಶಬ್ದ; ಅದು ಕನ್ನಡದಲ್ಲಿ ಸಂತಸ ಆಗುತ್ತದೆ. ಹಾಗೆಯೇ ಸಂಸ್ಕೃತದ ಅಪ್ಸರಸಿ ಎಂಬುದು ಅಚ್ಚರಸಿ. ಆಕಾಶ ಎಂಬುದು ಆಗಸ, ವ್ಯಾಧ ಎಂಬುದು ಬಿಯದ; ವಿನೋದ ಎಂಬುದು ಬಿನದ, ಬ್ರಹ್ಮ ಎಂಬುದು ಬೊಮ್ಮ ಆಗುತ್ತವೆ. ಇಂತಹ ಅನೇಕ ಶಬ್ದಗಳನ್ನು ನೋಡಬಹುದು. ಕೊನೆಗೆ ಆಂಡಯ್ಯ ಕಾವ್ಯ, ಕವಿ, ಕಾಮ ಇತ್ಯಾದಿ ಕನ್ನಡಕ್ಕೆ ಸಹಜವಾದ ಶಬ್ದಗಳನ್ನು ಹೇಳುವಂತಿಲ್ಲ. ಏಕೆಂದರೆ ಅವೂ ಸಂಸ್ಕೃತ ಶಬ್ದಗಳೇ. ಅವುಗಳಿಗೆ ಬದಲಾಗಿ ಆತ ಕಬ್ಬ, ಕಬ್ಬಿಗ, ಕಾಮ ಎಂಬ ತದ್ಭವಗಳನ್ನೇ ಬಳಸಬೇಕಾಗಿ ಬಂದಿದೆ. ಇದು ಕೆಲವು ಕಡೆಗಳಲ್ಲಿ ವಿಚಿತ್ರವಾದ ತದ್ಭವಗಳಿಗೆ ಕಾರಣವಾಗಿ ಅದೇ ಒಮ್ಮೊಮ್ಮೆ ಕಾವ್ಯಕ್ಕೆ ತೊಡಕೂ ಆಗಿ ಪರಿಣಮಿಸಿದೆ.

ಆದರೆ ಆಂಡಯ್ಯನ ಈ ನಿಷ್ಠೆಯಿಂದ ಒಂದು ಅನುಕೂಲವೇ ಆಯಿತು. ಕನ್ನಡದ ಕೆಚ್ಚನ್ನೂ ಸಹಜ ಸೌಂದರ್ಯವನ್ನೂ ಸೊಗಸನ್ನೂ ಅದು ತೋರಿಸಿಕೊಟ್ಟಿತು. ಅದರ ಜೊತೆಗೆ ಒಂದು ಮಿತಿಯನ್ನೂ ಕಲ್ಪಿಸಿತು. ಅತಿ ಪರಿಚಿತವಾದ ಕೆಲವು ಮಾತುಗಳನ್ನೂ ಅವು ಸಂಸ್ಕೃತವೆಂಬ ಕಾರಣ

ದಿಂದ ಆತ ಕೈಬಿಟ್ಟು ಅವುಗಳಿಗೆ ಬದಲಾಗಿ ತದ್ಭವಗಳನ್ನು ಹುಡುಕಬೇಕಾಯಿತು. ಅದು ಆತನ ವರ್ಣನೆಯ ವ್ಯಾಪ್ತಿಯನ್ನು ಕಿರಿದುಗೊಳಿಸಿತು. ಆದರೂ ಈ ಪರಿಮಿತಿಯಲ್ಲಿಯೇ ಆತ ಸಾಧಿಸಿರುವ ಸಾಧನೆ ಮೆಚ್ಚತಕ್ಕದ್ದು.

ಕಾವ್ಯದ ಪ್ರಾರಂಭದಲ್ಲಿಯೇ ಕನ್ನಡ ನಾಡಿನ ವರ್ಣನೆಯಿದೆ. ನನೆಯಂಬನ ಪೂವಿನ ಪೊಳಲು ಕನ್ನಡ ನಾಡಿನಲ್ಲಿತ್ತೆಂದು ಕವಿಯ ಹೇಳಿಕೆ. ಹೀಗೆ ಯಾವುದಾದರೂ ಒಂದು ಸನ್ನಿವೇಶವನ್ನು ಸೃಷ್ಟಿಸಿ ಕನ್ನಡ ನಾಡನ್ನು ವರ್ಣಿಸುವ ಅವಕಾಶವನ್ನು ನಮ್ಮ ಕವಿಗಳು ಸೃಷ್ಟಿಸಿಕೊಳ್ಳುತ್ತಾರೆ. ಪಂಪ, ರಾಘವಾಂಕ ಮೊದಲಾದವರು ಇದಕ್ಕೆ ಒಳ್ಳೆಯ ಉದಾಹರಣೆ. ಪಂಪಭಾರತದಲ್ಲಿ ಬನವಾಸಿಯ ವರ್ಣನೆ ಬರುತ್ತದೆ. ಅದಕ್ಕೆ ಅವಕಾಶವನ್ನು ಪಂಪ ಹೇಗೆ ತಂದುಕೊಂಡಿದ್ದಾನೆಂಬುದು ನಿಮಗೆ ಗೊತ್ತೇನು?"

"ಇಲ್ಲ ಸಾರ್, ಮಹಾಭಾರತದ ಮಧ್ಯದಲ್ಲಿ ಬನವಾಸಿಯ ವರ್ಣನೆ ಹೇಗೆ ಬರುತ್ತದೆ?" ಹುಡುಗರು ಕೇಳಿದರು.

"ಅದೇ ಕವಿಯ ಚತುರತೆ. ಅರ್ಜುನ ತೀರ್ಥಯಾತ್ರೆಗೆ ಹೋಗುವ ಪ್ರಸಂಗ ಮಹಾಭಾರತದಲ್ಲಿ ಬರುತ್ತದೆ. ಆ ಕಥೆ ನಿಮಗೆ ಗೊತ್ತಿರಬೇಕು" ಉಪಾಧ್ಯಾಯರು ಹೇಳಿದರು.

"ಸ್ವಲ್ಪ ಸ್ವಲ್ಪ ಗೊತ್ತು, ಆವಾಗ್ಲೆ ಅಲ್ವೆ ಸಾರ್ ಆತ ಚಿತ್ರಾಂಗದೆಯನ್ನು ಮದುವೆಯಾದದ್ದು?" ಒಬ್ಬ ಹೇಳಿದ. ಆಗ ಇನ್ನೊಬ್ಬ ಆತನತ್ತ ತಿರುಗಿ:

"ಅಷ್ಟೇ ಅಲ್ಲ, ಸುಭದ್ರೆಯನ್ನು ಅಪಹರಿಸಿದ್ದೂ ಆಗ್ಲೆ ಕಣೋ! ಅಲ್ವೇ ಸಾರ್?" ಎಂದು ಉಪಾಧ್ಯಾಯರ ಅಭಿಪ್ರಾಯ ಕೇಳಿದ.

"ಹೌದು ಹಾಗೆ ತೀರ್ಥಯಾತ್ರೆ ಹೊರಟ ಅರ್ಜುನ

ಅನೇಕ ಪ್ರದೇಶಗಳಲ್ಲಿ ಸಂಚರಿಸಿಕೊಂಡು ಬರುತ್ತಾ ಬನವಾಸಿಗೆ ಬರುತ್ತಾನೆ. ಅಲ್ಲಿ ಬನವಾಸಿಯ ಸೌಂದರ್ಯವನ್ನು ಕಂಡು ಮನಸೋಲುತ್ತಾನೆ; ಅದನ್ನು ಮನಸ್ಸು ತುಂಬಿ ಹೊಗಳುತ್ತಾನೆ. ಹೀಗೆ ಅರ್ಜುನನ ಬಾಯಿಂದ ಅಲ್ಲಿ ಬನವಾಸಿಯ ವರ್ಣನೆ ಬರುತ್ತದೆ. ಆದರೆ ವಾಸ್ತವವಾಗಿ ವರ್ಣಿಸುತ್ತಿರುವವನು ಕವಿ ಪಂಪನೇ. ಬಹುಶಃ ತನ್ನ ಬಾಲ್ಯದ ದಿನಗಳನ್ನು ಪಂಪ ಬನವಾಸಿಯಲ್ಲಿ ಕಳೆದಿರಬೇಕು. ಅದನ್ನು ಸ್ಮರಿಸಿಕೊಂಡು ಕನ್ನಡ ನಾಡಿನ ಸೌಂದರ್ಯವನ್ನೂ ಸಮೃದ್ಧಿಯನ್ನೂ ಅಲ್ಲಿನ ಜನರ ಹಿರಿಮೆಯನ್ನು ಆ ಮೂಲಕ ವರ್ಣಿಸಿದ್ದಾನೆ. ಒಂದು ಪದ್ಯದಲ್ಲಂತೂ ಆತ ಎಲ್ಲಿಯವರೆಗೂ ಹೋಗಿದ್ದಾನೆಂದರೆ: "ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್" –ಕನ್ನಡ ನಾಡಿನಲ್ಲಿ ಮನುಷ್ಯರಾಗಿ ಹುಟ್ಟಬೇಕಾದರೆ ಪುಣ್ಯ ಮಾಡಿರಬೇಕು. ಅದು ಎಲ್ಲರಿಗೂ ಲಭಿಸುವುದಿಲ್ಲ. ಒಂದು ವೇಳೆ ಅದು ಆಗದೇ ಹೋದರೆ ಬನವಾಸಿ ದೇಶದ ನಂದನವನಗಳಲ್ಲಿ ಚಿಕ್ಕ ದುಂಬಿಯಾಗಿ ಅಥವಾ ಕೋಗಿಲೆಯಾಗಿಯಾದರೂ ಹುಟ್ಟಬೇಕು- ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾನೆ.

"ರಾಘವಾಂಕನೂ ಹಾಗೇ ಹೊಗಳಿದ್ದಾನೆ ಎಂದು ಹೇಳಿದಿರಲ್ಲ, ಅದು ಎಲ್ಲಿ ಸಾರ್?" ಒಬ್ಬ ಹುಡುಗ ಕೇಳಿದ ಉಪಾಧ್ಯಾಯರು ಹೇಳಿದ ಮಾತನ್ನು ಜ್ಞಾಪಿಸಿಕೊಂಡು.

"ಹೌದು. ಹರಿಹರ ರಾಘವಾಂಕ ಇಬ್ಬರಿಗೂ ಈ ಮಾತು ಅನ್ವಯಿಸುತ್ತದೆ. ಅವರು ಇದ್ದದ್ದು ಪಂಪಾಕ್ಷೇತ್ರ ಅಂದರೆ ಹಂಪೆಯಲ್ಲಿ. ಹರಿಹರನಂತೂ ಪಂಪಾಕ್ಷೇತ್ರ ಮತ್ತು ಆ ಕ್ಷೇತ್ರದ ಅಧಿದೇವತೆ ಪಂಪಾವಿರೂಪಾಕ್ಷ

ಎಂದೊಡನೇ ಮೈಮರೆಯುತ್ತಾನೆ. ತನ್ನ ಅನೇಕ ರಗಳೆಗಳಲ್ಲಿ ಅವನ್ನು ಹಾಡಿ ಹಾಡಿ ತಣಿದಿದ್ದಾನೆ. ಹಾಗೆಯೇ ರಾಘವಾಂಕ ತನ್ನ ಪ್ರಸಿದ್ಧ ಕೃತಿಯಾದ 'ಹರಿಶ್ಚಂದ್ರ ಕಾವ್ಯ' ದಲ್ಲಿ ಒಂದು ಸನ್ನಿವೇಶವನ್ನು ಕಲ್ಪಿಸಿಕೊಳ್ಳುತ್ತಾನೆ. ಹರಿಶ್ಚಂದ್ರ ಬೇಟೆಯಾಡುತ್ತಾ ಕನ್ನಡ ನಾಡಿನ ಈ ಪಂಪಾಕ್ಷೇತ್ರದವರೆಗೂ ಬಂದನಂತೆ. ರಾಘವಾಂಕನ ಪ್ರಕಾರ ವಸಿಷ್ಠರ ಆಶ್ರಮವಿದ್ದುದು ಹಂಪೆಯಲ್ಲಿ. ಆದುದರಿಂದ ರಾಘವಾಂಕ ಹರಿಶ್ಚಂದ್ರನನ್ನು ಹಂಪೆಗೆ ಕರೆದುತಂದು ಪಂಪಾವಿರೂಪಾಕ್ಷನ ಮುಂದೆ ಆತನನ್ನು ನಮಸ್ಕರಿಸುವಂತೆ ಮಾಡಿ, ವಿರೂಪಾಕ್ಷನ ಸ್ತುತಿ ಮಾಡಿಸುತ್ತಾನೆ. ಆ ನೆಪದಲ್ಲಿ ಪಂಪಾಕ್ಷೇತ್ರವನ್ನೂ ಅದರ ಜೀವನದಿಯಾದ ತುಂಗಭದ್ರೆಯನ್ನೂ ಹೃದಯ ತುಂಬಿ ಹೊಗಳಿದ್ದಾನೆ.

ಹೀಗೆ ನಾಡುನುಡಿಗಳ ಪ್ರೇಮವನ್ನು ವ್ಯಕ್ತಪಡಿಸುವ ಯಾವ ಅವಕಾಶವನ್ನೂ ಕನ್ನಡ ಕವಿಗಳು ಕಳೆದುಕೊಳ್ಳುವುದಿಲ್ಲ. ಅದಕ್ಕನುಗುಣವಾಗಿ ಆಂಡಯ್ಯ ತನ್ನ ಕಥಾನಾಯಕನಾದ ನನೆಯಂಬನ ರಾಜಧಾನಿಯನ್ನು ಕನ್ನಡ ನಾಡಿನಲ್ಲಿಟ್ಟು ಅದರ ವರ್ಣನೆಯಿಂದಲೇ ಕಾವ್ಯವನ್ನು ಪ್ರಾರಂಭಿಸುತ್ತಾನೆ.

'ಕನ್ನಡಮೆನಿಪ್ಪ ನಾಡು ಚೆಲ್ವಾಯ್ತು' ಎಂದರೆ ಕನ್ನಡ ಎನ್ನುವ ನಾಡು ಸುಂದರವಾಗಿ ಕಂಗೊಳಿಸುತ್ತಿದೆ-ಎಂಬುದು ಆತನ ಹೇಳಿಕೆ. ಅದರ ಸೌಂದರ್ಯವನ್ನು ವರ್ಣಿಸುವುದೇ ಅಸಾಧ್ಯ. 'ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾರನಾ ನೆಲನಂ'–ಎಂದು ಹೆಮ್ಮೆಯಿಂದ ಹೇಳುತ್ತಾನೆ. ಅಂದರೆ ಆ ನೆಲವನ್ನು ಹಲವು ನಾಲಗೆಯುಳ್ಳವನೂ ಬಣ್ಣಿಸಲಾರನು, ಅದನ್ನು ವರ್ಣಿಸುವುದಕ್ಕೆ ಒಂದು ನಾಲಗೆ

ಸಾಲದು ಎಂಬ ಮಾತು ಹಾಗಿರಲಿ; ಹಲವು ನಾಲಗೆಯುಳ್ಳ ಆದಿಶೇಷನಿಗೂ ಬಣ್ಣಿಸುವುದಕ್ಕೆ ಅಸಾಧ್ಯವಂತೆ ಕನ್ನಡ ನಾಡನ್ನು, ಆದರೂ ಆಂಡಯ್ಯ ಅದನ್ನು ವರ್ಣಿಸದೆ ಇರಲಾರ. ಕಾವ್ಯದ ಪ್ರಾರಂಭದಲ್ಲಿಯೇ ಈ ವರ್ಣನೆ ಸ್ವಲ್ಪ ದೀರ್ಘವಾಗಿಯೇ ಬಂದಿದೆ. ಕಾವ್ಯದ ದೃಷ್ಟಿಯಿಂದ ಆ ವರ್ಣನೆಯಲ್ಲಿ ತೀರ ಹೊಸದೇನೂ ಇಲ್ಲವಾದರೂ ಆಂಡಯ್ಯನ ಭಾವನೆಯ ಉತ್ಸಾಹವಿದೆ; ನಾಡಿನ ವಿಚಾರದ ಶ್ರದ್ಧೆಯಿದೆ, ಪ್ರೇಮವಿದೆ; ಆದರ ಗೌರವಗಳಿವೆ.

ಮುಖ್ಯವಾಗಿ ಈ ವರ್ಣನೆಯಲ್ಲಿ ಕಾಣುವುದು ಕನ್ನಡ ನಾಡಿನ ಸಮೃದ್ಧಿ. ಪ್ರಕೃತಿ ಕರುಣಾಮಯಿಯಾಗಿ ಸದಾ ಫಲಭರಿತಳಾಗಿ ನಿಂತಿದ್ದಾಳೆ. ಪಂಪ ಇದನ್ನು ವರ್ಣಿಸುವಾಗ ಒಂದು ಕಡೆಯಲ್ಲಿ ಹೇಳಿದ್ದಾನೆ: "ಮಿಡಿದೊಡೆ ತನಿಗರ್ವುರಸಂ ಬಿಡುವುವು!" ಅಂದರೆ ಅಲ್ಲಿ ಬೆಳೆಯುವ ಕಬ್ಬುಗಳನ್ನು ಮೆಲ್ಲಗೆ ಬೆರಳಿನಿಂದ ಮಿಡಿದರೆ ಸಾಕು ಒಡನೆಯೇ ರಸವನ್ನು ಬಿಡುತ್ತಿದ್ದುವಂತೆ. ಅಷ್ಟು ರಸ ತುಂಬಿ ಕಬ್ಬುಗಳು ಅಲ್ಲಿ ಬೆಳೆಯುತ್ತಿದ್ದುವು. ಹಾಗೇ ಮುಂದುವರಿದು ಆತ ಹೇಳುತ್ತಾನೆ. ಅಲ್ಲಿನ ಒಂದು ಹಣ್ಣಿನ ರಸವನ್ನು ಕುಡಿಯುವುದರಲ್ಲಿ ಗಿಳಿಗಳಿಗೆ ಅಜೀರ್ಣವಾಗುತ್ತಿತ್ತಂತೆ! ಒಂದು ಹೂವಿನ ಮಕರಂದವನ್ನು ಕುಡಿಯುವುದರಲ್ಲಿ ತುಂಬಿಗಳಿಗೆ ಸಾಕುಬೇಕಾಗುತ್ತಿತ್ತಂತೆ! ಅಷ್ಟು ಸಮೃದ್ಧವಾಗಿ ಹೂವು ಹಣ್ಣುಗಳನ್ನು ಕೊಡುವ ನಾಡು ಇದು ಎನ್ನುತ್ತಾನೆ ಪಂಪ.

ಆಂಡಯ್ಯನ ವರ್ಣನೆ ಇದನ್ನು ನೆನಪಿಗೆ ತರುತ್ತದೆ. ಈ ನಾಡಿನ ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಎಲ್ಲಿ ನೋಡಿದರೂ ಸುಂದರವಾದ ತಾವರೆಯ ಕೊಳಗಳೂ ಅವುಗಳನ್ನು ಬಳಸಿರುವ ಉದ್ಯಾನವನಗಳೂ ಕಂಗೊಳಿಸುತ್ತವೆ. ಮಲ್ಲಿಗೆ,

ಸಂಪಿಗೆ, ದಾಳಿಂಬ, ತೆಂಗು, ಅಡಕೆಗಳು ಚಿನ್ನವನ್ನು ಬೆಳೆಯು ತ್ತಿವೆ; ಚಿನ್ನಕ್ಕೆ ಸುವಾಸನೆಯನ್ನು ಕೊಡುತ್ತಿವೆ.

ತೆಂಗಿನ ಮರವನ್ನು ಹತ್ತಿ ಕಪಿಗಳು ಅಲ್ಲಿಂದ ತೆಂಗಿನ ಕಾಯಿಗಳನ್ನು ಕೆಳಕ್ಕೆ ಕೆಡುವುತ್ತಿವೆ. ಹಾಗೆ ಬಿದ್ದ ಕಾಯಿ ಗಳು ಒಡೆದು ಅದರಿಂದ ಹೊರಬಂದ ಎಳನೀರು ಮಡು ವಾಗಿ ನಿಂತಿದೆ. ಆ ಎಳನೀರಿನ ಮಡುಗಳಿಂದ ಅಲ್ಲಿನ ಬನ ಗಳು ಬೆಳೆಯುತ್ತಿವೆ–ಎನ್ನುತ್ತಾನೆ. ಸಮೃದ್ಧಿಯನ್ನೂ ಸಂಪತ್ತನ್ನೂ ಸೂಚಿಸುವುದಕ್ಕೆ ಎಂತಹ ಕಲ್ಪನೆ!

ಬತ್ತದ ಗದ್ದೆಗಳು ಬೆಳೆದು ನಿಂತುದನ್ನು ನೋಡುವುದೇ ಒಂದು ಚೆಂದ. 'ಮೇಲೆ ಬಿಸಿಲು ಸುರಿಯುತ್ತಿದ್ದರೂ ನಮ್ಮನ್ನು ಕೊರಗಿಸದೆ ಇವು ತಂಪಿತ್ತು ಕಾಪಾಡಿದುವು'– ಎಂದು ಬಾಗಿ ನಮಸ್ಕರಿಸುವ ಹಾಗೆ ಬತ್ತದ ತೆನೆಗಳು ಭೂಮಿಯ ಕಡೆಗೆ ಬಾಗಿದ್ದುವು.

ತಾವರೆಕೊಳಗಳ ತಡಿಯಲ್ಲಿ ನೀರುಹಕ್ಕಿಗಳು ಆಟ ವಾಡುತ್ತಿವೆ; ಅವುಗಳ ರೆಕ್ಕೆಗಳಿಂದ ಸಿಡಿದ ನೀರಿನ ತುಂತುರು ಹನಿಗಳಿಂದ ಒದ್ದೆಯಾದ ಗಾಳಿ ತಂಪನ್ನು ಬೀರುತ್ತಾ ಮಂದ ಮಂದವಾಗಿ ಬೀಸುತ್ತಿದೆ.

ಆ ನಾಡಿನ ಉದ್ಯಾನವನಗಳನ್ನು ಎಷ್ಟು ವರ್ಣಿಸಿದರೂ ಆಂಡಯ್ಯನಿಗೆ ತೃಪ್ತಿಯಿಲ್ಲ. ಅಲ್ಲಿನ ಒಂದೊಂದು ಮರಕ್ಕೂ ಎಲೆಯ ಬಳ್ಳಿಗಳು ಹಬ್ಬಿ ಮನೋಹರವಾಗಿ ಕಾಣುತ್ತಿವೆ. ಒಂದೊಂದು ತೋಟದಲ್ಲಿಯೂ ಕೆರೆಗಳು; ಒಂದೊಂದು ಕೆರೆಯಲ್ಲಿಯೂ ಅರಳಿನಿಂತ ಕಮಲದ ಹೂವುಗಳು ಆಕ ರ್ಷಿಸುತ್ತಿದ್ದುವು.

ಮಾವಿನ ಮರಗಳಂತೂ ಚಿಗುರಿನಿಂತು ವಸಂತನ ವೈಭವವನ್ನು ಮೆರೆಯುತ್ತಿದ್ದುವು. ಕನ್ನಡ ಕವಿಗಳಿಗೆ

ಮಾವು ಬಹಳ ಪ್ರಿಯವಾದದ್ದು. ಅದರಲ್ಲಿಯೂ ಪಂಪನಿಗೆ ಅದು ಪ್ರಾಣ. ಮಾವು ಮತ್ತು ಮಲ್ಲಿಗೆಗಳಿಲ್ಲದೆ ಆತನ ವರ್ಣನೆ ಪೂರ್ಣವಾಗುವುದೇ ಇಲ್ಲ. ಮಾವಿನ ಮರವನ್ನು ಕುರಿತು ಆತ "ತರುಗಳೊಳ್ ನೀಂ ರಾಜನ್ಯೆ"-ಎನ್ನುತ್ತಾನೆ. ಮರಗಳಲ್ಲೆಲ್ಲಾ ಮಾವಿನ ಮರ ರಾಜನಂತೆ.

ಇಂತಹ ಮಾವಿನ ಮರಗಳಿಗೆ ಆಂಡಯ್ಯನೂ ಮಾರು ಹೋಗಿದ್ದಾನೆ. ಅವುಗಳನ್ನು ವರ್ಣಿಸಿದ್ದಾನೆ. ಮಾವಿನ ಮರಗಳು ಚಿಗುರಿ ನಿಂತಿವೆ. ಅವನ್ನು ಆಶ್ರಯಿಸಿ ಕೋಗಿಲೆಗಳು ಕುಹೂ ಕುಹೂ ಎಂದು ಹಾಡುತ್ತಿವೆ. ಜಲ ಜಲನೆ ನೀರನ್ನುಕ್ಕಿಸುತ್ತಾ ಪಕ್ಕದಲ್ಲಿ ಕಾಲುವೆಗಳು ಹಬ್ಬಿವೆ. ಹೂವಿನ ಮಕರಂದವನ್ನು ಕುಡಿಯುತ್ತ ದುಂಬಿಗಳು ಝೇಂಕರಿಸುತ್ತಿವೆ.

ಆನಂತರ ಹೂವಿನ ಪೊಳಲಿನ ವರ್ಣನೆಗೆ ಬರುತ್ತಾನೆ. ಅಲ್ಲಿ ಯಾವಾಗಲೂ ತಾವರೆ, ಮಲ್ಲಿಗೆ, ಸೇವಂತಿ, ಸಂಪಿಗೆ ಮೊದಲಾದ ಹೂವುಗಳನ್ನು ತುಂಬಿರುತ್ತಿದ್ದುದರಿಂದ ಹೂವಿನ ಹೊಳಲು ಎಂಬ ಹೆಸರು ಆದಕ್ಕೆ ಅನ್ವರ್ಥವಾಗಿತ್ತು-ಎಂದು ಪ್ರಾರಂಭಿಸಿ ಅಲ್ಲಿರುವ ಎತ್ತರವಾದ ಮಹಡಿ ಮನೆಗಳು, ಸುತ್ತಲೂ ಇದ್ದ ಕೋಟೆ ಮೊದಲಾದುವನ್ನು ವರ್ಣಿಸುತ್ತಾನೆ.

ಕಥೆ - ಕಾವ್ಯ

"ಕನ್ನಡ ನಾಡಿನ ವರ್ಣನೆ ಚೆನ್ನಾಗಿದೆ" ಇದನ್ನು ಕೇಳುತ್ತಿದ್ದ ಒಬ್ಬ ವಿದ್ಯಾರ್ಥಿ ಹೇಳಿದ.

"ಹಾಗೇ ಇತರ ವರ್ಣನೆಗಳೂ ಬಂದಿರಬೇಕಲ್ವೇ ಸಾರ್" ಇನ್ನೊಬ್ಬ ಕೇಳಿದ.

"ಹೌದು, ವರ್ಣನೆ ಇಲ್ಲದೆ ಕಥೆ ಮುಂದುವರಿಯುತ್ತದೆಯೇ? ಕನ್ನಡನಾಡು ಮತ್ತು ರಾಜಧಾನಿ ಪೂವಿನ ಪೊಳಲಿನ ವರ್ಣನೆಯಾದಮೇಲೆ ಅದರ ರಾಜನಾದ ನನೆಯುಂಬನನ್ನೂ ಆತನ ಶಕ್ತಿ ಔದಾರ್ಯ ಗಾಂಭೀರ್ಯಗಳನ್ನೂ ಆತನ ಸಂಪತ್ತನ್ನೂ ಹೇಳುತ್ತಾನೆ. ಅನಂತರ ವಸಂತ ಋತುವಿನ ವರ್ಣನೆ ಬರುತ್ತದೆ. ಇದು ಸಾಕಷ್ಟು ದೀರ್ಘವಾಗಿಯೇ ಇದೆ.

ಇವುಗಳಲ್ಲಿ ಒಂದು ಪದ್ಯವನ್ನು ಮಾತ್ರ ಹೇಳುತ್ತೇನೆ ಕೇಳಿ:

"ಕನರ್ಗೊರ್ನರಂ ಕರ್ದುಂಕಿ ದನಿದೋರುವ ಕೋಗಿಲೆ ಮೇಳದಾಳ್ಗಳೆಂ
ದೆನೆ, ಗಿಳಿವಿಂಡು ಬಂದೆರೆಯೆ ಬರ್ಪವರೆಂದೆನೆ, ಪೊಣ್ಮುತಿರ್ಪ ಪೂ।
ವಿನ ಪೊಸಗಂಪು ಕತ್ತುರಿಯ ಕಂಪೆನೆ, ಪಾಡುವ ತುಂಬಿ ಗಾಣರೆಂ
ದೆನೆ, ನನೆಯುಂಬನೋಲಗದ ಸಾಲೆವೊಲಿರ್ದುವು ಬಂದ ಮಾವುಗಳ್"

ಬಹುಶಃ ಈ ಪದ್ಯ ನಿಮಗೆ ಅರ್ಥವಾಗಿರಲಾರದು. ಅದನ್ನು ವಿವರಿಸುತ್ತೇನೆ ನೋಡಿ. ಇದು ಚಿಗುರಿದ ಮಾವಿನ ಮರದ ವರ್ಣನೆ. ಇದರಲ್ಲಿ ಕೊನೆಯ ಸಾಲನ್ನು ನೋಡಿ: 'ನನೆಯುಂಬನ ಓಲಗದ ಸಾಲೆಯ ವೊಲ್ ಇರ್ದುವು ಬಂದ ಮಾವುಗಳ್' - 'ಬಂದ ಮಾವು' ಅಂದರೆ ಚಿಗುರಿದ ಮಾವಿನ ಮರಗಳು; ಅವುಗಳು ನನೆಯುಂಬರಾಜನ ಒಡ್ಡೋಲಗದಂತೆ ಇದ್ದುವು ಎನ್ನುತ್ತಾನೆ. ರಾಜನ ಆಸ್ಥಾನದಲ್ಲಿ ಏನೇನು ಇರುತ್ತದೆಯೋ ಅದೆಲ್ಲಾ ಇಲ್ಲಿಯೂ ಇತ್ತು. ಹೇಗೆಂದರೆ, ಮಾವಿನ ಮರದ ಕೊನೆಯನ್ನು ಕಚ್ಚಿ ಹಾಡುತ್ತಿರುವ ಕೋಗಿಲೆಗಳೇ ರಾಜನ ಮೇಳದ ಆಳುಗಳು; ಅಲ್ಲಿಗೆ ಬಂದಿ

ರುವ ಗಿಳಿಗಳ ಸಮೂಹ ರಾಜನ ಬಳಿಯಲ್ಲಿ ಯಾಚನೆಗಾಗಿ ಬಂದಿರುವ ಆಶ್ರಿತರು; ಸುತ್ತಲೂ ಹರಡಿದ ಹೂವುಗಳ ಸುವಾಸನೆಯೇ ರಾಜಾಸ್ಥಾನದ ಕಸ್ತೂರಿಯ ಕಂಪು; ಹಾಡುತ್ತಿರುವ ದುಂಬಿಗಳೇ ಆಸ್ಥಾನದ ಗಾಯಕರು - ಹೀಗೆ ತಳಿತ ಮಾವಿನ ಮರದ ಸಂಭ್ರಮ ರಾಜನ ಆಸ್ಥಾನದ ಸೊಗಸನ್ನು ಪಡೆದಿದ್ದಿತು ಎನ್ನುತ್ತಾನೆ.

ಇಂತಹ ವರ್ಣನೆಯ ಪದ್ಯಗಳು ಉದ್ದಕ್ಕೂ ಬರುತ್ತವೆ. ಹಾಗೆ ನೋಡಿದರೆ ಈತನಲ್ಲಿ ವರ್ಣನೆಗಳು ಕಡಮೆ. ನಮ್ಮಲ್ಲಿ ಕೆಲವು ಕವಿಗಳು ತಮ್ಮ ಪಾಂಡಿತ್ಯದ ಪ್ರದರ್ಶನಕ್ಕಾಗಿ ಮತ್ತು ಸ್ಪರ್ಧೆಯ ಮನೋಭಾವನೆಯಿಂದ ಕಾವ್ಯದಲ್ಲಿ ವರ್ಣನೆಗಳನ್ನು ತಂದು ತುರುಕುವುದುಂಟು. ಅಲ್ಲದೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳು ಬಂದೇ ತೀರಬೇಕೆಂಬ ಸಂಪ್ರದಾಯವಿತ್ತು. ಸಮುದ್ರದ ವರ್ಣನೆ, ಪುರವರ್ಣನೆ, ರಾಜನ ವರ್ಣನೆ, ಸ್ತ್ರೀ ವರ್ಣನೆ - ಇತ್ಯಾದಿ ಹದಿನೆಂಟು ವರ್ಣನೆಗಳ ಪಟ್ಟಿಯೇ ನಮ್ಮಲ್ಲಿದೆ. ಇವುಗಳಲ್ಲಿ ಒಂದೊಂದನ್ನೂ ಆ ಅನುಭವ ತಮಗಿರಲಿ ಇಲ್ಲದಿರಲಿ ದೀರ್ಘವಾಗಿ ವರ್ಣಿಸಿದ ಕವಿಗಳೂ ಇದ್ದಾರೆ. ಆದರೆ ಆಂಡಯ್ಯ ಇಂತಹ ವರ್ಣನೆಗಳ ಚಪಲಕ್ಕೆ ಹೋಗಿಲ್ಲ. ಯಾವುದು ಎಷ್ಟು ಬೇಕೋ ಅಷ್ಟೆ. ಮಿತವಾಗಿ ವರ್ಣಿಸಿದ್ದಾನೆ; ಅಲ್ಲಲ್ಲಿ ಹಿತವಾಗಿಯೂ ಇದೆ.

ಅಂತಹ ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ನೋಡಬಹುದು. ಇದು ನೋಡಿ, ಎರಡು ಸೈನ್ಯಗಳು, ಶಿವನ ಸೈನ್ಯ ಮತ್ತು ಕಾಮನ ಸೈನ್ಯ ಒಂದನ್ನೊಂದು ಎದುರಿಸುವ ಸನ್ನಿವೇಶ.

'ತಡಿ ಮೀರಿ ಬಂದು ತೆಂಕಣ
ಬಡಗಣ ಕಡಲೊಂದನೊಂದು ತಾಗುವ ತೆರದಿಂ
ಬಿಡೆ ಗಜರಿ ಮಿಕ್ಕು ತಕ್ಕಿಂ
ಪಡೆಯೆರಡುಂ ದೆಸೆಗೆ ಮುಸಗಿ ತಾಗಿದುದೆತ್ತಂ ।'

ತೆಂಕಣ ಮತ್ತು ಬಡಗಣ ಎರಡು ಕಡಲುಗಳು ಅಂದರೆ ದಕ್ಷಿಣ ಸಮುದ್ರ ಮತ್ತು ಉತ್ತರ ಸಮುದ್ರಗಳು ಮೇರೆ ಮೀರಿ ಒಂದನ್ನೊಂದು ತಾಗುವಂತೆ ಎರಡು ಪಡೆಗಳು ಕೋಪದಿಂದ ಒಂದನ್ನೊಂದು ಎದುರಿಸಿದುವು. ಈ ಉದಾಹರಣೆ ಎಂತಹ ಭಯಂಕರವಾದ ಚಿತ್ರವನ್ನು ಕೊಡುತ್ತದೆ.

ಈಗ ಇನ್ನೊಂದು ಸನ್ನಿವೇಶವನ್ನು ನೋಡೋಣ. ಮನ್ಮಥ ಶಿವರಿಗೆ ಯುದ್ಧ ನಡೆಯುತ್ತದೆ. ಶಿವನ ಸೈನ್ಯವೆಲ್ಲಾ ನಾಶವಾಗುತ್ತದೆ. ಆಗ ಮನ್ಮಥ ಶಿವನ ಮೇಲೆ ಪುಷ್ಪ ಬಾಣಗಳನ್ನು ಬಿಡುತ್ತಾನೆ. ಆ ಸಂದರ್ಭದಲ್ಲಿ ಕವಿ ಕೊಡುವ ಕಲ್ಪನೆಯು ಹೊಸತನ ಮನಸೆಳೆಯುತ್ತದೆ:

"ಚಲದಿಂ ಕಾಮಂ ತೆಗೆದೆ
ಚ್ಚ ಲರಂಬೆಡೆಗೊಂಡು ತೊರೆಗಳುಂ ಬೆಟ್ಟುಗಳುಂ ।
ಪೊಲನುಂ ಬಾನುಂ ದೆಸೆಯುಂ
ಜಲಕ್ಕನಲರಿಂದೆ ಸಮೆದವೊಲಾಯ್ತೆತ್ತಂ ।"

ಕಾಮ ಚಲದಿಂದ ಹೂವಿನ ಬಾಣಗಳನ್ನು ತೆಗೆದು ಶಿವನ ಮೇಲೆ ಎಚ್ಚನು. ಅಂದರೆ ಪ್ರಯೋಗಿಸಿದನು. ಆ ಕೂಡಲೆ ತೊರೆಗಳು, ಬೆಟ್ಟಗಳು, ಹೊಲಗಳು, ಆಕಾಶ, ದಿಕ್ಕುಗಳು-ಈ ಎಲ್ಲವೂ ಹೂವಿನಿಂದ ಮುಚ್ಚಿಕೊಂಡವು. ಲೋಕವೆಲ್ಲಾ ಪುಷ್ಪಗಳಿಂದ ನಿರ್ಮಿತವಾದಂತಾಯಿತು.

ಇಂತಹ ವರ್ಣನೆಗಳು ಅಲ್ಲಲ್ಲಿ ಮಿಂಚುತ್ತವೆ. ಕಥೆಯನ್ನು ಕಾವ್ಯದ ಮಟ್ಟಕ್ಕೆ ಏರಿಸುತ್ತವೆ.

ಈತನ ಕಥೆಯ ವ್ಯಾಪ್ತಿ ಬಹಳ ಕಿರಿದು;ಏಕಮುಖವಾದದ್ದು. ಮನ್ಮಥ ಶಿವನನ್ನು ಎದುರಿಸಿ ಅವನನ್ನು ಅರೆವೆಣ್ಣನನ್ನಾಗಿ ಮಾಡಿದ. ಇಷ್ಟೇ ಕಥೆಯ ತಿರುಳು. ಇದನ್ನು ಬೆಳಸಿ ಒಂದು ಸುಂದರವಾದ ಚಿಕ್ಕ ಕಾವ್ಯವನ್ನಾಗಿ ಮಾಡಿರುವುದರಲ್ಲಿ ಕವಿಯ ಜಾಣ್ಮೆಯಿದೆ.

ಮಹಾಕವಿಗಳ ಶಕ್ತಿಯನ್ನಾಗಲೀ ವ್ಯಾಪ್ತಿಯನ್ನಾಗಲೀ ಇಲ್ಲಿ ನಿರೀಕ್ಷಿಸುವುದು ಸರಿಯಲ್ಲ. ನೂರು ಕೋಣೆಗಳಿಂದ ಕೂಡಿ ಆಕಾಶಕ್ಕೆ ತಲೆಯೆತ್ತಿನಿಂತ ಮಹಾಸೌಧವನ್ನು ಆತ ನಿರ್ಮಿಸಿಲ್ಲ. ಮೂರು ಕೋಣೆಗಳಿಂದ ಕೂಡಿ ಬಂದವರಿಗೆ ಸ್ವಲ್ಪ ನೆರಳನ್ನು ನೀಡುವ ಒಂದು ಕುಟೀರವನ್ನು ಕಟ್ಟಿದ್ದಾನೆ. ಅದರ ಸುತ್ತಲೂ ಇರುವ ಉದ್ಯಾನವನ, ಸರೋವರ, ಹಕ್ಕಿಗಳ ಮೆಲ್ಲುಲಿ ಮೊದಲಾದವು ಸ್ವಲ್ಪಕಾಲ ಆನಂದವನ್ನು ನಮಗೆ ಕೊಡಬಲ್ಲವು.

ಕಥೆ ಕಲ್ಪಿತವಾಗಿದ್ದರೂ ಮತ್ತು ವಿಚಿತ್ರವಾಗಿದ್ದರೂ ಓದುಗರ ಮನಸ್ಸಿನ ಮೇಲೆ ಒಂದು ರೀತಿಯ ಪರಿಣಾಮವನ್ನು ಬೀರುತ್ತದೆ. ನನೆಯಂಬ, ನಗೆಗಾರ, ಕರ್ವುವಿಲ್ಲ, ಇಚ್ಚೆಗಾರ್ತಿ, ತಂಗಾಳಿ, ಬಸಂತ, ಜೊನ್ನವಕ್ಕಿ ಇವು ಪಾತ್ರಗಳಾಗಿ ನಮ್ಮ ಮುಂದೆ ಸುಳಿದು ತಮ್ಮ ಹೆಸರಿನಿಂದಲೇ ಮನಸೆಳೆಯುತ್ತವೆ. ಇವು ಇನ್ನೂ ಜೀವಂತವಾಗಿ ಮೂಡಿಬರಬಹುದಿತ್ತು. ಆದರೆ ಕವಿಯ ಮತ್ತು ಕಾವ್ಯದ ಮಿತಿ ಅಷ್ಟಕ್ಕೆ ಅವರನ್ನು ನಿಲ್ಲಿಸುತ್ತದೆ.

ಮಧ್ಯದಲ್ಲಿ ಬರುವ ಸವಣನ ಪ್ರಸಂಗ ಗಮನಾರ್ಹವಾದದ್ದು. ಆ ಜೈನ ಸಂನ್ಯಾಸಿಯಿಂದ ಮಾತನ್ನೇನೂ ಆಡಿಸದೆ ಮುಂದೆ ಹೋದದ್ದು ತುಂಬಾ ಅರ್ಥವತ್ತಾಗಿದೆ. ಆತನ ಮಹಾಮೌನ ಕಾವ್ಯದ ಮೇಲೆ ಪ್ರಭಾವವನ್ನು ಬೀರಿದೆ.

ಶಿವ ಅರೆವೆಣ್ಣನಾದ ಪ್ರಸಂಗವೂ ಅಂತೆಯೇ ಅರ್ಥ ಗರ್ಭಿತವಾಗಿದೆ. ಅದು ಶಿವನ ಸೋಲಲ್ಲ ಎಂಬುದನ್ನು ಸೂಚಿಸಿದ್ದಾನೆ. ಆತ ರುದ್ರನಾಗಿ ಕಾಮನಿಗೆ ಶಾಪ ಕೊಡು ತ್ತಾನೆ. ತನ್ನ ಹಿರಿಯ ಶಕ್ತಿಯನ್ನು ಉಳಿಸಿಕೊಂಡುದಕ್ಕೆ ಅದು ಸಾಕ್ಷಿಯಾಗಿದೆ.

ಬಹುಶಃ ಇದು ರಾಜಕೀಯದ ಘಟನೆಗೂ ಅನ್ವಯಿಸು ತ್ತದೆನ್ನಬಹುದು. ಆಂಡಯ್ಯನಿಗೆ ಆಶ್ರಯ ಕೊಟ್ಟ ಕದಂಬ ರಾಜ ಕಾಮದೇವ, ಹೊಯ್ಸಳ ಬಲ್ಲಾಳನನ್ನು ಗೆದ್ದದ್ದು ನಿಜ. ಅದು 'ಕಾವನಗೆಲ್ಲ'. ಆದರೆ ಅದರಿಂದ ಬಲ್ಲಾಳ ಸಂಪೂರ್ಣವಾಗಿ ಸೋಲಲಿಲ್ಲ. ಮುಂದೆ ಆತ ಹೊಯ್ಸಳರ ಲ್ಲೆಲ್ಲಾ ಅತಿ ಪರಾಕ್ರಮಿಯಾದ ರಾಜನಾಗಿ ಇಡೀ ಕರ್ನಾಟ ಕಕ್ಕೇ ಚಕ್ರವರ್ತಿಯಾಗಿ ಆಳಿದ. ಅಂತಹ ಪರಾಕ್ರಮಿ ಯನ್ನೇ ಸೋಲಿಸಿದುದು ಕಾಮದೇವನ ಹಿರಿಮೆಯೆಂದು ಕವಿ ಸೂಚಿಸಿರುವಂತೆ ತೋರುತ್ತದೆ.

ಏನೇ ಆಗಲಿ ಆಂಡಯ್ಯ ಈ ಕಥೆಯನ್ನು ಕಾವ್ಯವನ್ನಾಗಿ ಮಾಡಿರುವ ಕೌಶಲ್ಯ ಮೆಚ್ಚತಕ್ಕದ್ದು. ಅಂತೆಯೇ ಆತನ ಇನ್ನೊಂದು ವೈಶಿಷ್ಟ್ಯವೆಂದರೆ ಹಿಂದಾಗಲೇ ಹೇಳಿರುವಂತೆ ಅಚ್ಚಗನ್ನಡದಲ್ಲಿ ಕಾವ್ಯವನ್ನು ಬರೆದದ್ದು. ಅದು ಆತನಿಗೆ ಒಂದು ಪರಿಮಿತಿಯನ್ನು ಕಲ್ಪಿಸಿರಬಹುದಾದರೂ ಕನ್ನಡದ ಕೆಚ್ಚನ್ನು ಕಂಡುಕೊಳ್ಳಲು ಸಹಾಯಕವಾಯಿತು. ಈ ದೃಷ್ಟಿಯಿಂದ ಆಂಡಯ್ಯ ಅದ್ವಿತೀಯನಾಗಿ ಉಳಿಯು ತ್ತಾನೆ.

ಇದರ ಅರ್ಥ ನಿಜವಾಗಿ ನಮಗೆ ಆಗಬೇಕಾದರೆ ನೀವೇ ಕಾವ್ಯವನ್ನು ಓದುವಂತಾಗಬೇಕು. ಕನ್ನಡವನ್ನು ಚೆನ್ನಾಗಿ ಅಧ್ಯಯನ ಮಾಡಿದರೆ ಮುಂದೆ ನಿಮಗೆ ಆ ಶಕ್ತಿ ಬರುತ್ತದೆ.

ಈಗ ನಿಮಗೆ ಆ ಕವಿಯ ಬಗ್ಗೆ ಕುತೂಹಲ ಹುಟ್ಟಿದ್ದರೆ ಸಾಕು."

"ಖಂಡಿತ ಸಾರ್....ಆ ಕಾವ್ಯವನ್ನು ನಾವು ಓದಬೇಕು ಅಂತ ಅನಿಸುತ್ತೆ."

"ಹೌದು, ಮುಂದೆ ಒಂದಲ್ಲ ಒಂದು ದಿನ ಓದೇ ಓದ್ತೀವಿ ಸಾರ್" ಎಂದು ವಿದ್ಯಾರ್ಥಿಗಳು ಸಂತೋಷದಿಂದ ಉದ್ಗಾರ ತೆಗೆದರು.

"ತುಂಬಾ ಸಂತೋಷ; ನಾನಿನ್ನು ಬರ್ತೇನೆ" ಎಂದು ಉಪಾಧ್ಯಾಯರು ವಿದ್ಯಾರ್ಥಿಗಳ ನಮಸ್ಕಾರಗಳನ್ನು ಸ್ವೀಕರಿಸುತ್ತಾ ತರಗತಿಯಿಂದ ಹೊರಗೆ ನಡೆದರು.

ಪ್ರಶ್ನೆಗಳು

ನೀವು ಇದುವರೆವಿಗೂ ಕನ್ನಡದಲ್ಲಿ ವಿಶಿಷ್ಟನಾದ ಜೈನಕವಿ ಆಂಡಯ್ಯನನ್ನು ಕುರಿತು ಓದಿದಿರಿ. ಈಗ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿ.

1. 'ಆಂಡಯ್ಯ' ಎಂಬ ಹೆಸರಿನ ಅರ್ಥ ವಿವರಣೆ ನೀಡಿರಿ ?
2. ಆಂಡಯ್ಯನಿಗೆ 'ಕಬ್ಬಿಗರಕಾವಂ' ಎಂಬ ಬಿರುದು ಬರಲು ಕಾರಣ ವೇನು ?
3. ಆಂಡಯ್ಯ ಚಿತ್ರಿಸಿರುವ 'ಕಾಮನ ಕಥೆ'ಯನ್ನು ಸಂಕ್ಷಿಪ್ತವಾಗಿ ಬರೆಯಿರಿ.
4. ಆಂಡಯ್ಯ ಕನ್ನಡ ನಾಡನ್ನು ಹೇಗೆ ವರ್ಣಿಸಿದ್ದಾನೆ ?


ಕನ್ನಡದ ಕವಿ ಪುಂಗವರು

ಕನ್ನಡದ ಕಡುಗಲಿಗಳು

ಆಧುನಿಕ ಕರ್ನಾಟಕ ನಿರ್ಮಾಪಕರು

ಕರ್ನಾಟಕದ ವೈಭವ

ಕರ್ನಾಟಕದ ಸುವರ್ಣ ಯುಗ



ಇಂಡಿಯಾ ಬುಕ್ ಹೌಸ್ — — ಬೆಂಗಳೂರು ೮